# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 27-10-2017ರ ಶುಕ್ರವಾರದಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರು:**

1. ಪ್ರೊ. ದಯಾನಂದ ಮಾನೆ – ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು
2. ಡಾ. ನಿಂಗಮ್ಮ ಸಿ.ಬೆಟ್ಸೂರ್ – ಸದಸ್ಯರು
3. ಶ್ರೀ ಪುಷ್ಪಕುಮಾರ್ ಎಂ.ವಿ. – ಸದಸ್ಯರು
4. ಡಾ. ಎಂ.ಸಿ.ನಟರಾಜ – ಸದಸ್ಯರು
5. ಶ್ರೀ ಕೆ.ಎಂ.ಕಾಳೇಗೌಡ – ಸದಸ್ಯರು
6. ಪ್ರೊ. ಡಿ. ನಂಜುಂಡಯ್ಯ – ಸದಸ್ಯರು
7. ಶ್ರೀ ಲಯನ್ ಹೆಚ್. ರಮೇಶ್, – ಸದಸ್ಯರು
8. ಶ್ರೀ ಮಹಮದ್‌ಅಬ್ದುಸ್ಸಲಾಂ – ಸದಸ್ಯರು
9. ಶ್ರೀ ಕುಮಾರ್ – ಸದಸ್ಯರು
10. ಶ್ರೀಮತಿ ಎಂ.ಎನ್. ಪೊನ್ನಮ್ಮ, – ಸದಸ್ಯರು
11. ಶ್ರೀ ಎಂ.ಎಸ್.ಎಸ್. ಕುಮಾರ್ – ಸದಸ್ಯರು
12. ಶ್ರೀ ಜಗದೀಶ್ ಎಲ್, – ಸದಸ್ಯರು
13. ಶ್ರೀಮತಿ ಸಹನಾ ಶಿವಪ್ಪ – ಸದಸ್ಯರು
14. ಪ್ರೊ. ಜೆ. ಸೋಮಶೇಖರ್ – ಸದಸ್ಯರು
    ಕುಲಸಚಿವ(ಪರೀಕ್ಷಾಂಗ) – ಸದಸ್ಯರು
15. ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

**<u>ಹಾಜರಾಗದ ಸದಸ್ಯರು:</u>**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
6. ಶ್ರೀಮತಿ ಶೃತಿತರುಣ್‌ಗಿರಿ, ಸಿಂಡಿಕೇಟ್ ಸದಸ್ಯರು

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ಏಳನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಆಹ್ವಾನಿಸಿ ಕಾರ್ಯಸೂಚಿಯಲ್ಲಿ ಮಂಡಿಸಲಾಗಿರುವ ವಿಷಯಗಳಿಗೆ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ತಮ್ಮ ಅಮೂಲ್ಯ ಸಲಹೆಗಳನ್ನು ನೀಡಬೇಕೆಂದು ಕೋರಿದರು.

ನಂತರ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ಘನತೆವೆತ್ತ ಸನ್ಮಾನ್ಯ ಕುಲಾಧಿಪತಿಗಳಿಂದ ನಾಮಕರಣಗೊಂಡ ಶ್ರೀಮತಿ ಸಹನಾ ಶಿವಪ್ಪ, ಮದ್ದೂರು ಮತ್ತು ಶ್ರೀ ಜಗದೀಶ್.ಎಲ್, ಮೈಸೂರು ಅವರನ್ನು ಸಿಂಡಿಕೇಟ್ ಸಭೆಗೆ ಸ್ವಾಗತಿಸಿದ ನಂತರ ಇತರ ಸದಸ್ಯರೊಂದಿಗೆ ಅವರನ್ನು ಪರಸ್ಪರ ಪರಿಚಯಿಸಲಾಯಿತು.

ಮುಂದುವರೆದು ಮಾನ್ಯ ಕುಲಪತಿಗಳು ಎಲ್ಲ ಸಿಂಡಿಕೇಟ್ ಸದಸ್ಯರ ಸಹಕಾರದೊಂದಿಗೆ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಿತದೃಷ್ಟಿಯಿಂದ ಉತ್ತಮ ಕೆಲಸಗಳನ್ನು ನಿರ್ವಹಿಸುತ್ತಾ ಬಂದಿರುವುದಾಗಿ ತಿಳಿಸಿ, ಆತ್ಮವಿಶ್ವಾಸದಿಂದ ಕೆಲಸನಿರ್ವಹಿಸಲು ಹೊಸದಾಗಿ ನಾಮನಿರ್ದೇಶನಗೊಂಡಿರುವ ಮಾನ್ಯ ಸದಸ್ಯರು ಸಹ ಉತ್ತಮ ಸಲಹೆಗಳನ್ನು ನೀಡಿ ವಿಶ್ವವಿದ್ಯಾನಿಲಯದ ಒಳಿತಿಗಾಗಿ ಮತ್ತು ಅದರ ಏಳಿಗೆಗೆ ಆಡಳಿತದೊಂದಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| 1 | ದಿನಾಂಕ 18-09-2017ರಂದು ನಡೆದ ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ |
| ತೀರ್ಮಾನ | ದಿನಾಂಕ 18-09-2017 ರಂದು ಜರುಗಿದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ 2017/9.27ಕ್ಕೆ ಮತ್ತು ವಿಷಯ ಸಂಖ್ಯೆ: 9.28ಕ್ಕೆ ಸಂಬಂಧಿಸಿದಂತೆಕುಲಸಚಿವ(ಪರೀಕ್ಷಾಂಗ)ಅವರು ಆಕ್ಷೇಪಣೆ ಸಲ್ಲಿಸಿರುವುದನ್ನು ಪರಿಶೀಲಿಸಿದ ಸಿಂಡಿಕೇಟ್ ಅದರ ಬದಲಿಗೆ ಈ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.<br><u>ವಿಷಯ ಸಂಖ್ಯೆ 2017/9.27:</u><br>"ಯಾರೇ ಹೊರಗಿನ ವ್ಯಕ್ತಿ/ಸಂಘ ಸಂಸ್ಥೆಗಳು ವಿಶ್ವವಿದ್ಯಾನಿಲಯದ ಉದ್ಯೋಗಿಗಳ/ವಿದ್ಯಾರ್ಥಿಗಳ ಮೇಲೆ ಆರೋಪ ಮಾಡಿ ಕ್ರಮಕೈಗೊಳ್ಳುವಂತೆ ಮನವಿ ಸಲ್ಲಿಸಿದಲ್ಲಿ ಅಂತಹ ವಿಷಯಗಳ ಬಗೆಗೆ ಮೊದಲಿಗೆ ವಿಶ್ವವಿದ್ಯಾನಿಲಯದಲ್ಲಿ ಆಂತರೀಕವಾಗಿ ಸತ್ಯಾಸತ್ಯತೆಯ ಬಗ್ಗೆ ಪರಿಶೀಲಿಸಿ ಅಧಿಕೃತವಾಗಿ ಒಂದು ವರದಿಯನ್ನು ಪಡೆದು ಆನಂತರ ಸಿಂಡಿಕೇಟ್‌ನ ಪರಿಶೀಲನೆ ಮತ್ತು ನಿರ್ಣಯಕ್ಕೆ ವಿಷಯವನ್ನು ಮಂಡಿಸಲು ಸಭೆಯು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಮೊದಲಿಗೆ ಉಪಕುಲಸಚಿವರು (ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕ) ಅನಧಿಕೃತವಾಗಿ ಆಯ್ಕೆಗೊಂಡಿದ್ದರೆಂದು ಆರೋಪಿಸಲ್ಪಟ್ಟಿರುವ ವಿದ್ಯಾರ್ಥಿಗಳಿಂದ ಲಿಖಿತ ವಿವರಣೆ ಪಡೆದು ವರದಿಯನ್ನು ಸಿದ್ದಪಡಿಸಿ ಕುಲಸಚಿವ (ಪರೀಕ್ಷಾಂಗ) ಅವರ ಮೂಲಕ ವಿಷಯವನ್ನು ಮುಂದಿನ ಸಿಂಡಿಕೇಟ್‌ಗೆ ಮಂಡಿಸಲು ಸೂಚಿಸಬೇಕೆಂದು ಮತ್ತು ಅನಧಿಕೃತವಾಗಿ ಆಯ್ಕೆಗೊಂಡಿರುವ ವಿದ್ಯಾರ್ಥಿಗಳ ಬಗ್ಗೆ ತ್ವರಿತವಾಗಿ ವಿಚಾರಣೆ ನಡೆಸಿ, ಇದಕ್ಕೆ ಕಾರಣ ಕರ್ತರಾದವರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವುದು ಹಾಗೂ ಈಗಾಗಲೇ ಆಯ್ಕೆಗೊಂಡಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆನ್ನುವ ಉದ್ದೇಶದಿಂದ ಯುಜಿಸಿಯು ಫೆಲೋಶಿಪ್ ಮಂಜೂರು ಮಾಡಿದರೆ ಅಂತಹ ವಿದ್ಯಾರ್ಥಿಗಳಿಂದ ಸೂಕ್ತವಾದ ಮುಚ್ಚಳಿಕೆ ಬರೆಸಿಕೊಂಡು ಅವರಿಗೆ ಸಂಶೋಧನೆಗೆ ಅನುವು ಮಾಡಿಕೊಡಲು ಸಿಂಡಿಕೇಟ್ ತೀರ್ಮಾನಿಸಿತು"<br><u>ವಿಷಯ ಸಂಖ್ಯೆ: 9.28</u><br>ವಿಷಯ ಸಂಖ್ಯೆ 9.28ಕ್ಕೆ ಸಂಬಂಧಪಟ್ಟಂತೆ ದಿನಾಂಕ 18-09-2017ರಂದು ಜರುಗಿದ ಸಿಂಡಿಕೇಟ್‌ನಲ್ಲಿ ತೆಗೆದುಕೊಂಡ ತೀರ್ಮಾನಕ್ಕೆ ಬದ್ದವಾಗಿರಲು ಸಿಂಡಿಕೇಟ್ ತೀರ್ಮಾನಿಸಿತು.<br><u>ವಿಷಯ ಸಂಖ್ಯೆ: 9.13</u><br>ವಿಷಯ ಸಂಖ್ಯೆ 9.13ರ ವಿಷಯದ ಮೊದಲಿದ್ದ ತೀರ್ಮಾನಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶವನ್ನು **ಸೇರ್ಪಡೆ** ಮಾಡಿಕೊಳ್ಳುವುದರೊಂದಿಗೆ ತಿದ್ದುಪಡಿ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು.<br>ಹೊಸದಾಗಿ ಪ್ರಾರಂಭವಾದ 5 ವಿಭಾಗಗಳ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರಿಗೆ ಬಿಡುಗಡೆಯಾಗದಿರುವ ಜುಲೈ, ಆಗಸ್ಟ್, ಸೆಪ್ಟೆಂಬರ್ ಹಾಗೂ ಅಕ್ಟೋಬರ್ 2017ರ ತಿಂಗಳುಗಳ ರೂ. 50,000/-ಗಳ ವೇತನವನ್ನು ತಕ್ಷಣವೇ ಬಿಡುಗಡೆ ಮಾಡುವುದು.<br>"ಕೆಮಿಸ್ಟ್ರಿ-3, ಆರ್ಗ್ಯಾನಿಕ್ ಕೆಮಿಸ್ಟ್ರಿ-3, ಸ್ಕೂಲ್ ಆಫ್ ಲಾ-1, ಸಂಖ್ಯಾಶಾಸ್ತ್ರ-2 ಒಟ್ಟು 09 ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೂ ಸಹ ಈಗಾಗಲೇ ಆದೇಶ ಹೊರಡಿಸಿರುವ ದಿನಾಂಕದಿಂದ ಎರಡು ವರ್ಷಗಳಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ತಿದ್ದುಪಡಿ ಆದೇಶ ನೀಡಿ ಪ್ರತಿ ತಿಂಗಳು ಈ ಎಲ್ಲ ಸಹಾಯಕ ಪ್ರಾಧ್ಯಾಪಕರಿಗೂ ಸಹ ರೂ. 50,000/-ಗಳ ಸಂಬಳ ನೀಡಲು ತೀರ್ಮಾನಿಸಿತು ಹಾಗೂ ಒಟ್ಟು 09 ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಎರಡು ವರ್ಷಗಳ ನಂತರ ಅಂದರೆ ಏಪ್ರಿಲ್ 2018ರಿಂದ ಕೆಲಸದಿಂದ ಬಿಡುಗಡೆಗೊಳಿಸಿ ಆಯಾ ವಿಭಾಗಗಳಿಗೆ ಅವಶ್ಯವಿದ್ದಲ್ಲಿ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಿ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳುವುದು"<br>ಮೇಲಿನ ತಿದ್ದುಪಡಿ ತೀರ್ಮಾನಗಳೊಂದಿಗೆ ದಿನಾಂಕ 18-09-2017ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಯನ್ನು ದೃಢೀಕರಿಸಲಾಯಿತು. |
| 2 | ದಿನಾಂಕ 18.09.2017 ರಂದು ನಡೆದ ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| ತೀರ್ಮಾನ | ಸಿಂಡಿಕೇಟ್ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ವಿಶ್ವವಿದ್ಯಾನಿಲಯವು ಕ್ರಮಕೈಗೊಂಡಿರುವ ವರದಿಯನ್ನು ಗಮನಿಸಲಾಯಿತು. |

| | |
|---|---|
| 3 | ದಿನಾಂಕ 21-09-2017 ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | SPL Syn2017/9.3ರ ವಿಷಯದ ಮೊದಲಿದ್ದ ತೀರ್ಮಾನಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶವನ್ನು ಸೇರ್ಪಡೆ ಮಾಡಿಕೊಳ್ಳುವುದರೊಂದಿಗೆ ದಿನಾಂಕ 21-09-2017ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಯನ್ನು ದೃಢೀಕರಿಸಲಾಯಿತು.<br>**"ಹಾಗೂ ದಿನಾಂಕ 3-4-2017 ಮತ್ತು 20-6-2017ರಂದು ನಡೆದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯು ತೆಗೆದುಕೊಂಡಿರುವ ತೀರ್ಮಾನಗಳನ್ನು ಅನುಮೋದಿಸಿತು"** |
| 4 | ದಿನಾಂಕ 21-09-2017 ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| ತೀರ್ಮಾನ | ಸಿಂಡಿಕೇಟ್ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ವಿಶ್ವವಿದ್ಯಾನಿಲಯವು ಕ್ರಮ ಕೈಗೊಂಡಿರುವ ವರದಿಯನ್ನು ಗಮನಿಸಲಾಯಿತು. |
| **2017/10.1** | ಡಾ. ಚಂದ್ರಶೇಖರಯ್ಯ ಇವರನ್ನು ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನೆ ಮತ್ತು ವಿಸ್ತರಣ ಕೇಂದ್ರದಲ್ಲಿ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಮುಂದುವರಿಸುವ ಬಗ್ಗೆ. |
| ತೀರ್ಮಾನ | ಡಾ. ಚಂದ್ರಶೇಖರಯ್ಯ, ಸಂದರ್ಶಕ ಪ್ರಾಧ್ಯಾಪಕರು, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇವರನ್ನು ಮತ್ತೊಂದು ವರ್ಷದ ಅವಧಿಗೆ ರೂ.25,000/-ಗಳ ಗೌರವ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.2** | ಪ್ಲಾನಿಂಗ್ ಕಮೀಷನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಪ್ಲಾನಿಂಗ್ ಕಮಿಷನ್ ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ.ಎಂ.ವಿ.ಶ್ರೀನಿವಾಸಗೌಡ ಇವರ ಅವಧಿಯು ದಿನಾಂಕ 31-01-2017ರಂದು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ, 3-8-2017ರಂದು ನಡೆದ ಸಿಂಡಿಕೇಟ್ ತೀರ್ಮಾನದಂತೆ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಅಧ್ಯಕ್ಷರು ದಿನಾಂಕ 13-09-2017ರಂದು ಸಲ್ಲಿಸಿರುವ ಮೂರು ತಜ್ಞರ ಪಟ್ಟಿಯಲ್ಲಿನ ಈ ಕೆಳಕಂಡ ನಿವೃತ ಪ್ರಾಧ್ಯಾಪಕರನ್ನು ಆದ್ಯತಾನುಸಾರವಾಗಿ ನಿಯಮಾನುಸಾರ ಒಬ್ಬರನ್ನು ಒಂದು ವರ್ಷದ ಅವಧಿಗೆ ರೂ.10,000/-ಗಳ ಗೌರವಧನದೊಂದಿಗೆ ಪ್ಲಾನಿಂಗ್ ಕಮೀಷನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಒಂದು ವರ್ಷದ ಅವಧಿಗೆ ಆಹ್ವಾನಿಸಲು ಸಭೆಯು ನಿರ್ಣಯಿಸಿತು. ಒಂದು ವೇಳೆ ಆದ್ಯತಾನುಸಾರ ನೇಮಕಗೊಂಡ ಪ್ರಾಧ್ಯಾಪಕರು ವಿಶ್ವವಿದ್ಯಾನಿಲಯದ ಆಹ್ವಾನವನ್ನು ಪರಿಗಣಿಸದಿದ್ದ ಪಕ್ಷದಲ್ಲಿ ಮುಂದಿನ ಸರದಿಯಲ್ಲಿರುವ ಮತ್ತೊರ್ವ ತಜ್ಞರನ್ನು ಆಹ್ವಾನಿಸಲು ತೀರ್ಮಾನಿಸಿತು.<br>1. **Prof. T.R.Chandrashekhara**<br>Professor (Retd.)<br>Consultant, Fourth State Finance Comission(GOK)<br>South Block,Third Floor, Khanija Bhavan<br>Race Course Road, Bengaluru 560 001<br>Mobile No.: 9449029311<br>2. **Prof. M.R.Narayana**<br>Formerly Professor of Economics<br>Centre for Economic Studies and Policy<br>Institute for Social and Economic Change (ISEC)<br>Nagarabhave P.O. Bengaluru – 560 072<br>Mobile No.: 9008999107 |

| | |
|---|---|
| **2017/10.3** | ಡಾ. ಜಾಕೀರ್ ಹುಸೇನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಡಾ. ಜಾಕೀರ್ ಹುಸೇನ್ ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಪಿ.ಜಯರಾಮಯ್ಯ ಇವರ ಅವಧಿಯು ದಿನಾಂಕ 22-07-2017ರಂದು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕರು ದಿನಾಂಕ 25-07-2017ರಂದು ಸಲ್ಲಿಸಿರುವ ಮೂರು ತಜ್ಞರ ಪಟ್ಟಿಯಲ್ಲಿನ ಈ ಕೆಳಕಂಡ ವಿಷಯ ತಜ್ಞರನ್ನು ಆದ್ಯತಾನುಸಾರವಾಗಿ ಒಬ್ಬರನ್ನು ನಿಯಮಾನುಸಾರ ಒಂದು ವರ್ಷದ ಅವಧಿಗೆ ರೂ. 8,000/-ಗಳ ಗೌರವಧನದೊಂದಿಗೆ ಡಾ. ಜಾಕೀರ್ ಹುಸೇನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಒಂದು ವರ್ಷದ ಅವಧಿಗೆ ಆಹ್ವಾನಿಸಲು ಸಭೆಯು ನಿರ್ಣಯಿಸಿತು. ಒಂದು ವೇಳೆ ನೇಮಕಗೊಂಡ ಸಂದರ್ಶಕ ಪ್ರಾಧ್ಯಾಪಕರು ವಿಶ್ವವಿದ್ಯಾನಿಲಯದ ಆಹ್ವಾನವನ್ನು ಪರಿಗಣಿಸದಿದ್ದ ಪಕ್ಷದಲ್ಲಿ ಮುಂದಿನ ಸರದಿಯಲ್ಲಿ ಆದ್ಯತಾನುಸಾರ ಹೆಸರಿಸಿರುವ ಮತ್ತೊರ್ವ ತಜ್ಞರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ತೀರ್ಮಾನಿಸಿತು.<br><br>1. **Dr. C.Chowdaiah**<br>No. 337, "Chandana", Navilu Road, A& B Block<br>Kuvempunagar, Mysore – 570 023<br>2. **Dr.Krishna Murthy**<br>195, Kanakanagar<br>Madagalli, PO. M.K.Halli<br>Mysore- 570 026<br>3. **Dr. Rajashekhara Shetty**<br># 514/A 111 Cross, 3rd Main<br>Saraswathipuram, Mysore-9 |
| **2017/10.4** | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ಸಿ.ಕೆ.ರೇಣುಕಾರ್ಯ ಇವರು ದಿನಾಂಕ 31-03-2016ರಂದು ರಾಜೀನಾಮೆ ನೀಡಿರುವ ಹಿನ್ನೆಲೆಯಲ್ಲಿ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಅಧ್ಯಕರು ದಿನಾಂಕ 13-09-2017ರಂದು ಸಲ್ಲಿಸಿರುವ ಮೂವರು ತಜ್ಞರ ಪಟ್ಟಿಯಲ್ಲಿಈ ಕೆಳಕಂಡ ವಿಷಯ ತಜ್ಞರನ್ನು ಆದ್ಯತಾನುಸಾರವಾಗಿ ಒಬ್ಬರನ್ನು ನಿಯಮಾನುಸಾರ ಒಂದು ವರ್ಷದ ಅವಧಿಗೆ ರೂ. 10,000/-ಗಳ ಗೌರವಧನದೊಂದಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಒಂದು ವರ್ಷದ ಅವಧಿಗೆ ಆಹ್ವಾನಿಸಲು ಸಭೆಯು ನಿರ್ಣಯಿಸಿತು. ಒಂದು ವೇಳೆ ನೇಮಕಗೊಂಡ ಸಂದರ್ಶಕ ಪ್ರಾಧ್ಯಾಪಕರು ವಿಶ್ವವಿದ್ಯಾನಿಲಯದ ಆಹ್ವಾನವನ್ನು ಪರಿಗಣಿಸದಿದ್ದ ಪಕ್ಷದಲ್ಲಿ ಮುಂದಿನ ಸರದಿಯಲ್ಲಿ ಆದ್ಯತಾನುಸಾರ ಹೆಸರಿಸಿರುವ ಮತ್ತೊರ್ವ ತಜ್ಞರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ತೀರ್ಮಾನಿಸಿತು.<br><br>1. **Prof. L.Sridhara Murhty**<br>Professor, Amrita Viswavidyapeetham<br>Amrita School of Arts and Sciences<br>Bogadi, Mysuru.<br>2. **Prof. T.R.Manjunath**<br>Professor of Economics<br>Post Graduate Department of Economics<br>Kuvempu University, Shankaraghatt-577 451 |

| | |
|---|---|
| **2017/10.5** | ಡಾ.ಎ.ಕೆ. ಮೋಹನ್, ಸಹ ಪ್ರಾಧ್ಯಾಪಕರು, ಸಮಾಜ ಕಾರ್ಯ ಅಧ್ಯಯನ ವಿಭಾಗ, ಸ್ಕೂಲ್ ಆಫ್ ಸೋಷಿಯಲ್ ಸೈನ್ಸ್, ಕೇರಳ ಕೇಂದ್ರಿಯ ವಿಶ್ವವಿದ್ಯಾನಿಲಯ, ಕೇರಳ ಇವರು ಮೈಸೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಮೇಲಿನ ಹಕ್ಕನ್ನು ಕಾಯ್ದಿರಿಸುವಂತೆ ಮನವಿಯನ್ನು ಸಲ್ಲಿಸಿರುವ ಬಗ್ಗೆ. |
| ತೀರ್ಮಾನ | ಡಾ.ಎ.ಕೆ. ಮೋಹನ್, ಸಹ ಪ್ರಾಧ್ಯಾಪಕರು, ಸಮಾಜ ಕಾರ್ಯ ಅಧ್ಯಯನ ವಿಭಾಗ, ಸ್ಕೂಲ್ ಆಫ್ ಸೋಷಿಯಲ್ ಸೈನ್ಸ್, ಕೇರಳ ಕೇಂದ್ರಿಯ ವಿಶ್ವವಿದ್ಯಾನಿಲಯ, ಕೇರಳದಲ್ಲಿ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸುವವರೆಗೆ ಅಥವಾ ಬಿಡುಗಡೆಗೊಳಿಸಿದ ದಿನಾಂಕ 08-03-2017ರಿಂದ 07-03-2019ರವರೆಗೆ ಅಂದರೆ ಎರಡು ವರ್ಷಗಳ ಅವಧಿಗೆ ಯಾವುದೂ ಮೊದಲು ಘಟಿಸುವುದೋ ಅದುವರೆಗೆ ಸಮಾಜ ಕಾರ್ಯ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಮೇಲಿನ ಹಕ್ಕನ್ನು ಕಾಯ್ದಿರಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.6** | ದಿವಂಗತ ಬಾಬು ಎಸ್. ಸೇವಕರು, ಮಹಾರಾಜ ಕಾಲೇಜು, ಮೈಸೂರು ಅವರ ಮಗನಾದ ಶ್ರೀ ಸಚಿನ್ ಬಾಬು ಕೆ.ಬಿ ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಗಳ ಅನ್ವಯ, ದಿವಂಗತ ಬಾಬು ಎಸ್, ಸೇವಕರು, ಮಹಾರಾಜ ಕಾಲೇಜು, ಮೈಸೂರು ಅವರ ಮಗನಾದ ಶ್ರೀ ಸಚಿನ್ ಬಾಬು ಕೆ.ಬಿ., ಇವರು ಪಿಯುಸಿ ವಿದ್ಯಾರ್ಹತೆ ಹೊಂದಿರುವುದರಿಂದ, ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಗೆ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| **2017/10.7** | ದಿವಂಗತ ಅರುಣ್ ಬಿ.ಆರ್, ದ್ವಿತೀಯ ದರ್ಜೆ ಗುಮಾಸ್ತರು. ಪರೀಕ್ಷಾಂಗ ವಿಭಾಗ, ಮೈ.ವಿ.ವಿ. ಮೈಸೂರು ಅವರ ಮಗನಾದ ಶ್ರೀ ಅರ್ಜುನ್, ಎ.ಗೌಡ ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ, ದಿವಂಗತ ಅರುಣ್ ಬಿ.ಆರ್, ದ್ವಿತೀಯ ದರ್ಜೆ ಗುಮಾಸ್ತರು. ಪರೀಕ್ಷಾಂಗ ವಿಭಾಗ, ಮೈ.ವಿ.ವಿ.ಮೈಸೂರು ಅವರ ಮಗನಾದ ಶ್ರೀ ಅರ್ಜುನ್ ಎ.ಗೌಡ ಇವರು ಪಿಯುಸಿ ವಿದ್ಯಾರ್ಹತೆ ಹೊಂದಿರುವುದರಿಂದ, ರವರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಗೆ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| **2017/10.8** | ವಿಶ್ವವಿದ್ಯಾನಿಲಯದಲ್ಲಿ ಸೇವೆಯಲ್ಲಿರುವಾಗಲೇ ನಿಧನರಾದ ಉದ್ಯೋಗಿಯ ಕುಟುಂಬದ ಅವಲಂಬಿತರೊಬ್ಬರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಗಳ ಅನ್ವಯ, ದಿವಂಗತ ಶ್ರೀ ಪಾಪಣ್ಣ, ನಿಲಯ ಸಹಾಯಕರು, ಗೌತಮ ವಿದ್ಯಾರ್ಥಿನಿಲಯ, ಮಾನಸಗಂಗೋತ್ರಿ, ಮೈಸೂರು ಅವರ ಮಗನಾದ ಶ್ರೀ ಆರ್. ಪಿ. ರಾಜೇಂದ್ರ ರವರಿಗೆ ವಿದ್ಯಾರ್ಹತೆಗೆ ಅನುಸಾರವಾಗಿ, ಖಾಲಿ ಇರುವ ನಿಲಯ ಸಹಾಯಕರ ಹುದ್ದೆಗೆ ಅನುಕಂಪದ ಆಧಾರದ ಮೇಲೆ ನಿಲಯ ಸಹಾಯಕರ ಹುದ್ದೆಗೆ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| **2017/10.9** | ಅಂತರ್ ರಾಷ್ಟ್ರೀಯ ಸಂಬಂಧ (P.G), ಮಹಾರಾಜ ಕಾಲೇಜು, ಮೈಸೂರು, ಇವರು School of International Studies, JNU, New Delhi, ಇವರೊಡನೆ ಶೈಕ್ಷಣಿಕವಾಗಿ MoA ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | ಡಾ.ಭಾರತೀ ಹಿರೇಮಠ್, ಸಂಯೋಜಕರು, Department of International Relations (PG), ಮಹಾರಾಜ ಕಾಲೇಜು, ಮೈಸೂರು ಇವರು School of International Studies (SIS), JNU, ನವದೆಹಲಿ, ಇವರೊಡನೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ |

| | |
|---|---|
| | ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಅನುಕೂಲವಾಗುವಂತೆ ರಾಜ ತಾಂತ್ರಿಕತೆ ಮತ್ತು ಪ್ರಚಲಿತ ಆಡಳಿತ ವಿದ್ಯಮಾನಗಳ ವಿಷಯಗಳಲ್ಲಿ ಹಾಗೂ ಅಂತಾರಾಷ್ಟ್ರೀಯ ಸಂಬಂಧಗಳ ವಿಷಯಗಳಲ್ಲಿ ತರಬೇತಿ ನೀಡುವ ಸಲುವಾಗಿ (Internship) ಮಂಡಿಸಲಾಗಿರುವ ಪ್ರಸ್ತಾವನೆಯಲ್ಲಿ ವಿಶ್ವವಿದ್ಯಾನಿಲಯದ ಆರ್ಥಿಕ ಹೊಣೆಗಾರಿಕೆಹಾಗೂನಿಬಂಧನೆಗಳು ಮತ್ತು ಷರತ್ತುಗಳ ಬಗ್ಗೆ ಸ್ಪಷ್ಟತೆಯಿಲ್ಲದಿರುವುದರಿಂದ ಸದರಿ ಪ್ರಸ್ತಾವನೆಯನ್ನುಕೈಬಿಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.10** | Retirement of Post-Graduate Teachers during the Calendar Year 2018 |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರು 2018ನೇ ಕ್ಯಾಲೆಂಡರ್ ವರ್ಷದಲ್ಲಿ ನಿವೃತ್ತಿ ವಯೋಮಾನ ತಲುಪಲಿದ್ದು,ಅಂತಹ ಅಧ್ಯಾಪಕರುಗಳಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತರಾಗಲು ಸಿಂಡಿಕೇಟ್ ಅನುಮತಿಸಿ, ಪುನಃ ಅವರನ್ನು Contractual Basisನಲ್ಲಿ ಆಯಾ ಸೆಮಿಸ್ಟರ್ ಮುಗಿಯುವವರೆಗೆ ಅಧಿನಿಯಮಾನುಸಾರ ನೇಮಕ ಮಾಡಲು ಸಭೆಯು ತೀರ್ಮಾನಿಸಿತು. |
| **2017/10.11** | 2018ನೇ ಕ್ಯಾಲೇಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗುವ ನೌಕರರಿಗೆ ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ ಅಧ್ಯಾಪಕೇತರರು ಹಾಗೂ ತಾಂತ್ರಿಕ ವರ್ಗದ ಉದ್ಯೋಗಿಗಳು 2018ನೇ ಕ್ಯಾಲೆಂಡರ್ ವರ್ಷದಲ್ಲಿ ನಿವೃತ್ತಿ ವಯೋಮಾನ ತಲುಪುವುದರಿಂದ ಸದರಿ ಉದ್ಯೋಗಿಗಳು ನಿಗಧಿತ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತರಾಗಲು ಸಿಂಡಿಕೇಟ್ ಒಪ್ಪಿಗೆ ನೀಡಿತು ಮತ್ತು ನ್ಯಾಯಾಲಯದಲ್ಲಿ ಸದರಿ ಉದ್ಯೋಗಿಗಳ ಯಾವುದಾದರೂ ಕ್ರಿಮಿನಲ್ ಮತ್ತು ಇತರೆ ಪ್ರಕರಣಗಳು/ಇಲಾಖಾ ವಿಚಾರಣೆಗಳು, ವಿಶ್ವವಿದ್ಯಾನಿಲಯಕ್ಕೆ ಬರಬೇಕಾದ ಬಾಕಿಗಳು ಮತ್ತಿತ್ತರ ಅಂಶಗಳನ್ನು ಪರಿಶೀಲಿಸಿ ಪಿಂಚಣಿ ವಿತರಿಸುವ ಸಂಬಂಧ ಕಟ್ಟುನಿಟ್ಟಾದ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.12** | ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು ಇವರಿಗೆ ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ವಿವಿಧ ವಿಷಯಗಳಲ್ಲಿ ನಡೆಸುತ್ತಿರುವ ಸಂಶೋಧನಾ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ (1) Linguistics (2) Special Education ವಿಷಯಗಳಲ್ಲಿ ಮಾನ್ಯತೆ ನೀಡುವ ಬಗ್ಗೆ-ಪರಿವೀಕ್ಷಣಾ ಸಮಿತಿಯವರು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರಿರುವ ಬಗ್ಗೆ. |
| **Decision** | The Syndicate approved the recommendations of the committee that the institution can be recognized as a research center to offer Ph.D degree Courses in(i) **Special Education** and (ii) **Linguistics**of the University of Mysore from the Academic year 2017-18. |
| **2017/10.13** | ಹಾಸನದ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜನ್ನು ಪ್ರಸ್ತುತ ಕಟ್ಟಡದಿಂದ ನೂತನ ಕಟ್ಟಡಕ್ಕೆ ಬದಲಾವಣೆ ಮಾಡಲು ಸಮಿತಿ ಪರಿಶೀಲನೆ ನಡೆಸಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ತಂದು ಅನುಮೋದನೆ ಪಡೆಯುವ ಬಗ್ಗೆ. |
| ತೀರ್ಮಾನ | ಹಾಸನದ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜನ್ನು 2017-18ನೇ ಶೈಕ್ಷಣಿಕ ಸಾಲಿನಿಂದ ನೂತನ ಕಟ್ಟಡಕ್ಕೆ ಸ್ಥಳಾಂತರಿಸುವ ಬಗ್ಗೆ ರಚಿತಗೊಂಡಿರುವ ಸಮಿತಿಯು ದಿನಾಂಕ 18.09.2017 ರಂದು ಭೇಟಿ ನೀಡಿ ಅಲ್ಲಿನ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ, ನೀಡಲಾಗಿರುವ ವರದಿಗಳನ್ನು ಸಿಂಡಿಕೇಟ್ ಅನುಮೋದಿಸಿ, ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಸಾಲಿಗಾಮೆ ರಸ್ತೆ, ಹಾಸನ- 573201 ಕಾಲೇಜನ್ನು ಪ್ರಸ್ತುತ ವಿಳಾಸದಿಂದ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಡೈರಿ ಸರ್ಕಲ್ ಹತ್ತಿರ, ಬಿ. ಕಾಟೀಹಳ್ಳಿ, ಹಾಸನ- 573201 ನೂತನ ವಿಳಾಸಕ್ಕೆ ಬದಲಾವಣೆ ಮಾಡಿಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2017/10.14** | ಶ್ರೀ ಶಂಕರ ಬಿ. ಉಪ ಕುಲಸಚಿವರು (ಸಾಮಾನ್ಯ), ಆಡಳಿತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಶ್ರೀ ನಾಗೇಶ್ ಆರ್. ಸಹಾಯಕ ಕುಲಸಚಿವರು ಇವರ ವಿರುದ್ಧ ಸಲ್ಲಿಸಿರುವ ದೂರಿನ ಸಂಬಂಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 15.09.2017ರಂದು ಶ್ರೀ ಶಂಕರ ಬಿ.ಉಪಕುಲಸಚಿವರು (ಸಾಮಾನ್ಯ), ಆಡಳಿತ ವಿಭಾಗ, ಮೈಸೂರು, ಇವರಿಗೆ ಕಛೇರಿ ಕೆಲಸಗಳ ಸಂಬಂಧ ದೂರವಾಣಿ ಕರೆಯಲ್ಲಿ ಏಕವಚನದಲ್ಲಿ ಮಾತನಾಡಿ ಅನುಚಿತವಾಗಿ ವರ್ತಿಸಿರುವ ಬಗ್ಗೆ ಶ್ರೀ ನಾಗೇಶ್ ಆರ್. ಸಹಾಯಕ ಕುಲಸಚಿವರ ವಿರುದ್ಧ ದೂರನ್ನು ಸಲ್ಲಿಸಿದ್ದು, ಶ್ರೀ ನಾಗೇಶ್ ಆರ್. ಸಹಾಯಕ ಕುಲಸಚಿವರ ನಡತೆಯು ವಿಶ್ವವಿದ್ಯಾನಿಲಯದ ಸಿಸಿಎ ಅಧಿನಿಯಮ 1983ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುವುದರಿಂದ ಈಗಾಗಲೇ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರಕ್ಕೆ ವರ್ಗಾವಣೆ ಮಾಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತ್ತಲ್ಲದೇ ಇವರಿಗೆ ಎಚ್ಚರಿಕೆ ನೀಡಿ, ಮುಚ್ಚಳಿಕೆಯನ್ನು ಬರೆಯಿಸಿಕೊಂಡು ಪ್ರಕರಣವನ್ನು ಮುಕ್ತಾಯಗೊಳಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.15** | ಡಾ. ಎಂ.ವಿ. ಕೃಷ್ಣಪ್ಪ, ನಿವೃತ್ತ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ನಿರ್ದೇಶಕರಾಗಿದ್ದ ಅವಧಿಯಲ್ಲಿ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟವನ್ನು ಇವರ ನಿವೃತ್ತಿ ವೇತನದಿಂದ ವಸೂಲು ಮಾಡುವಂತೆ ಸರ್ಕಾರದಿಂದ ಬಂದಿರುವ ನಿರ್ದೇಶನದ ಬಗ್ಗೆ. |
| ತೀರ್ಮಾನ | ಪ್ರಸ್ತುತ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕನ್ನಡ ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ, ಬೆಂಗಳೂರು ಹಾಗೂ ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರು ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತಿ ಹೊಂದಿರುವ ಡಾ.ಎಂ.ವಿ.ಕೃಷ್ಣಪ್ಪರವರಿಂದ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟವನ್ನು ಇವರ ನಿವೃತ್ತಿ ವೇತನದ ಶೇ.25ರಷ್ಟು ಭಾಗವನ್ನು ಮೂರು ವರ್ಷಗಳವರೆಗೆ ಕಡಿತಗೊಳಿಸಿ, ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮಾ ಮಾಡುವಂತೆಯೂ ಮತ್ತು ಇದರ ಮಾಹಿತಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಕೋರಿರುವುದರ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಿಂಡಿಕೇಟ್ ಅದರಂತೆ ಕ್ರಮಕೈಗೊಳ್ಳಲು ತೀರ್ಮಾನಿಸಿತು. |
| **2017/10.16** | ಮೇ/ಜೂನ್ **2017ನೇ** ಸಾಲಿನ ಎಂ.ಎಸ್ಸಿ. ರಸಾಯನಶಾಸ್ತ್ರ ನಾಲ್ಕನೇ ಸೆಮಿಸ್ಟರ್‌ಗೆ ಸಂಬಂಧಪಟ್ಟಂತೆ Challenge **Valuation**ಗೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ **Physical Chemistry** ಪತ್ರಿಕೆಯ ಮೊದಲನೇ ಮೌಲ್ಯಮಾಪನದ ಬಗ್ಗೆ. |
| ತೀರ್ಮಾನ | ಮೆ/ಜೂನ್ **2017ನೇ** ಸಾಲಿನಲ್ಲಿ ನಡೆದ ಎಂ.ಎಸ್ಸಿ.ರಸಾಯನಶಾಸ್ತ್ರ ನಾಲ್ಕನೇ ಸೆಮಿಸ್ಟರ್‌ನ Physical **Chemistry** ಪತ್ರಿಕೆಯ ಮೌಲ್ಯಮಾಪನ ಫಲಿತಾಂಶದಿಂದ ಅತೃಪ್ತರಾದ ಕೆಲವು ವಿದ್ಯಾರ್ಥಿಗಳು ಚಾಲೆಂಜ್ ವ್ಯಾಲುಯೇಷನ್‌ಗಾಗಿ ಅರ್ಜಿ ಸಲ್ಲಿಸಿದ್ದ ಕಾರಣ ನಿಯಮಾನುಸಾರ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿಸಿ, ಫಲಿತಾಂಶ ಪ್ರಕಟಿಸಲಾಗಿದ್ದು, ಚಾಲೆಂಜ್ ವ್ಯಾಲುಯೇಷನ್ ಫಲಿತಾಂಶದಲ್ಲಿ ಮೊದಲನೇ ಮೌಲ್ಯಮಾಪನದ ಅಂಕಗಳಿಗೂ ಹಾಗೂ ಚಾಲೆಂಜ್ ವ್ಯಾಲುಯೇಷನ್ ಅಂಕಗಳಿಗೂ ಹೆಚ್ಚು ವ್ಯತ್ಯಾಸ ಇದ್ದುದರ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರ ಆದೇಶದಂತೆ ರಹಸ್ಯ ಮೌಲ್ಯಮಾಪನ ಮಾಡಿಸಲಾಗಿದ್ದು, ಈ ಕೆಳಕಂಡಂತೆ ಮೌಲ್ಯಮಾಪನಗಳಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳ ವಿವರ ಕೆಳಕಂಡಂತಿವೆ. |

| ಕ್ರ.ಸಂ | ವಿದ್ಯಾರ್ಥಿಗಳ ನೊಂದಣಿ ಸಂಖ್ಯೆ | ಮೊದಲನೇ ಮೌಲ್ಯಮಾಪಕರು ನೀಡಿರುವ ಅಂಕಗಳು | ಚಾಲೆಂಜ್ ವ್ಯಾಲುಯೇಷನ್ ಅಂಕಗಳು | ರಹಸ್ಯ ಮೌಲ್ಯಮಾಪನದ ಅಂಕಗಳು |
|---|---|---|---|---|
| 1 | **CH115043** | 23 | **32** | **40** |
| 2 | **CH115081** | 18 | **32** | **35** |
| 3 | **CH115080** | 17 | **34** | **33** |

| | | | | |
|---|---|---|---|---|
| 4 | CH115079 | 13 | 28 | 30 |
| 5 | CH115075 | 17 | 40 | 38 |
| 6 | CH115404 | 14 | 22 | 24 |
| 7 | CH115401 | 09 | 17 | 17 |

ಮೇಲಿನ ಮೂರು ಮೌಲ್ಯಮಾಪನಗಳ ಪೈಕಿ ಮೊದಲನೇ ಮೌಲ್ಯಮಾಪನದ ಅಂಕಗಳಿಗೂ ಹಾಗೂ ಚಾಲೆಂಜ್ ವ್ಯಾಲುಯೇಷನ್‌ನಲ್ಲಿ ನೀಡಲಾಗಿರುವ ಅಂಕಗಳಿಗೂ ಬಹಳಷ್ಟು ವ್ಯತ್ಯಾಸ ಕಂಡುಬಂದಿದ್ದು, ಚಾಲೆಂಜ್ ವ್ಯಾಲುಯೇಷನ್ ಹಾಗೂ ರಹಸ್ಯ ಮೌಲ್ಯಮಾಪನಗಳ ಅಂಕಗಳು ಪರಸ್ಪರ ಹತ್ತಿರದಲ್ಲಿರುವುದನ್ನು ಗಮನಿಸಿದ ಸಿಂಡಿಕೇಟ್ ಮೊದಲನೇ ಮೌಲ್ಯಮಾಪಕರಾದ ಡಾ. ಬಿ.ವೆಂಕಟೇಶ್‌ರವರು ನಿರ್ವಹಿಸಿರುವ ಮೌಲ್ಯಮಾಪನಕಾರ್ಯದಿಂದ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗಿರುವುದಲ್ಲದೆ, **ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟವಾಗಿರುವುದರಿಂದ, ಸದರಿಯವರನ್ನು ಎರಡು ವರ್ಷಗಳ ಕಾಲ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸದಂತೆ ಆದೇಶಿಸುವುದು ಹಾಗೂ ಯುವರಾಜ ಕಾಲೇಜಿನ Controller of Examination ಹುದ್ದೆಯಿಂದ ತೆಗೆದುಹಾಕಲು ನಿರ್ಣಯಿಸಿತು.**

| | |
|---|---|
| **2017/10.17** | ದಿನಾಂಕ 11-09-2017ರಂದು ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸುವ ಬಗ್ಗೆ. |
| ತೀರ್ಮಾನ | 2017-18ನೇ ಸಾಲಿನಲ್ಲಿ ಪ.ಜಾತಿ: ಪ.ವರ್ಗ ವಿಶೇಷ ಘಟಕದ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ದಿನಾಂಕ 11.09.2017 ರಂದು ನಡೆದ ಸ್ಥಾಯಿ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು ಹಾಗೂ ಸದರಿ ಕೇಂದ್ರದ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ರೂ.2.00 ಕೋಟಿಗಳು ಸಾಲುವುದಿಲ್ಲವಾದ್ದರಿಂದ ವಿಶ್ವವಿದ್ಯಾನಿಲಯದ ನಿಯಮಾನುಸಾರ ಪರಿಶೀಲಿಸಿ ಆಯವ್ಯಯದಲ್ಲಿ ಹೆಚ್ಚುವರಿ ಮಾಡಲು ಕ್ರಮಕೈಗೊಳ್ಳುವಂತೆ ಸಿಂಡಿಕೇಟ್ ತೀರ್ಮಾನಿಸಿತು. |
| **2017/10.18** | ಜೈವಿಕತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ಐಸಿಎಆರ್ ಡಿಎಂಆರ್‌ಎಲ್ ಯೋಜನೆಯಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು 2017-18ನೇ ಸಾಲಿನಿಂದ 2019-2020ನೇ ಸಾಲಿನವರೆಗೆ ಮುಂದುವರಿಸುವ ಬಗ್ಗೆ. |
| ತೀರ್ಮಾನ | ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ಐಸಿಎಆರ್ ಡಿಎಂಆರ್‌ಎಲ್ ಯೋಜನೆಯನ್ನು 2017-18ನೇ ಸಾಲಿನಿಂದ ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತು ಹಾಗೂ ಯೋಜನಾ ಅವಧಿ ಪೂರ್ಣಗೊಳ್ಳುವವರೆಗೆ ಅಥವಾಅನುದಾನಿತ ಸಂಸ್ಥೆಯ ಮುಂದಿನ ನಿರ್ದೇಶನದವರೆಗೆ ಸದರಿ ಯೋಜನೆಯಡಿ ನಿಯಮಾನುಸಾರ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳನ್ನು ಸಹ ಮುಂದುವರೆಸಲು ಸಿಂಡಿಕೇಟ್ ಅನುಮತಿಸಿತು. |
| **2017/10.19** | 2018ನೇ ಕ್ಯಾಲೆಂಡರ್ ವರ್ಷದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಅಧ್ಯಾಪಕರುಗಳಲ್ಲಿ ವಯೋಮಾನ ತಲುಪಿ ನಿವೃತ್ತರಾಗುವುದಕ್ಕೆ ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರು 2018ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ತಲುಪುವುದರಿಂದ ಸದರಿ ಉದ್ಯೋಗಿಗಳು ನಿಗಧಿತ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತರಾಗಲು ಸಿಂಡಿಕೇಟ್ ಒಪ್ಪಿಗೆ ನೀಡಿತು ಮತ್ತು ನ್ಯಾಯಾಲಯದಲ್ಲಿ ಸದರಿ ಉದ್ಯೋಗಿಗಳ ಯಾವುದಾದರೂ ಕ್ರಿಮಿನಲ್ ಮತ್ತು ಇತರ ಪ್ರಕರಣಗಳು/ಇಲಾಖಾ ವಿಚಾರಣೆಗಳು, ವಿಶ್ವವಿದ್ಯಾನಿಲಯಕ್ಕೆ ಬರಬೇಕಾದ ಬಾಕಿಗಳು ಮತ್ತಿತ್ತರ ಅಂಶಗಳನ್ನು ಪರಿಶೀಲಿಸಿ ಪಿಂಚಣಿ ವಿತರಿಸುವ ಸಂಬಂಧ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2017/10.20** | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವ ಹಾಗೂ **Autonomy** ನೀಡಲಾಗಿರುವ 04 ಸಂಸ್ಥೆಗಳಿಗೆ Expert **Committee**ಯು ಭೇಟಿ ನೀಡಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Program ಗಳನ್ನು ನಡೆಸುತ್ತಿರುವ ಹಾಗೂ **Autonomy** ನೀಡಲಾಗಿರುವ 04 ಸಂಸ್ಥೆಗಳು ನಡೆಸಲಾಗುತ್ತಿರುವ ಕೋರ್ಸುಗಳ ಬಗ್ಗೆ ವಿಶ್ವವಿದ್ಯಾನಿಲಯದ ನಿಯಮಗಳನ್ನು ಪಾಲಿಸುತ್ತಿವೆಯೇ ಎಂಬುದನ್ನು ಪರಿಶೀಲಿಸಲು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ರಚಿತಗೊಂಡ Expert Committeeಯು ದಿನಾಂಕ 09.10.2017ರಂದು ಸಂಸ್ಥೆಗಳಿಗೆ ಭೇಟಿ ನೀಡಿ ನೀಡಿರುವ ಶಿಫಾರಸ್ಸುಗಳನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/10.21** | ಶ್ರೀ ಎನ್.ಎ.ಉಮೇಶ, ಸಹಾಯಕ ಅಭಿಯಂತರರು, ಇವರ ಹುದ್ದೆಯನ್ನು ಮಾರ್ಪಡಿಸಿರುವ ಕುರಿತು ಪರಿಶೀಲಿಸಲು ರಚಿಸಿದ್ದ ಸಿಂಡಿಕೇಟ್ ಉಪ ಸಮಿತಿಯ ವರದಿಯನ್ನು ಮಂಡಿಸುತ್ತಿರುವ ಬಗ್ಗೆ. |
| ತೀರ್ಮಾನ | ದಿನಾಂಕ 01-08-2006 ರಿಂದ ಜಾರಿಗೆ ಬಂದಂತೆ ಶ್ರೀ ಎನ್.ಎ.ಉಮೇಶ, ಇವರನ್ನು ಕಿರಿಯ ಅಭಿಯಂತರರ ಹುದ್ದೆಯಿಂದ ಸಹಾಯಕ ಅಭಿಯಂತರರ ಹುದ್ದೆಗೆ ಮಾರ್ಪಡಿಸಿರುವ ವಿಷಯವನ್ನು ಪರಿಶೀಲಿಸಲು ಕುಲಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಿಂಡಿಕೇಟ್ ಉಪಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಸರ್ವಾನುಮತದಿಂದ ಅನುಮೋದಿಸಿತು.<br>ಶ್ರೀ ಎನ್.ಎ.ಉಮೇಶ, ಸಹಾಯಕ ಅಭಿಯಂತರರು, ಇವರು ಈಗಾಗಲೇ 17ವರ್ಷಗಳಿಂದ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವುದರಿಂದ ಇವರಿಗೆ ವಿಶ್ವವಿದ್ಯಾನಿಲಯವು ತೆಗೆದುಕೊಂಡಿರುವ ನಿರ್ಣಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಒಂದು ಅವಕಾಶವನ್ನು ನೀಡುವುದು ಹಾಗೂ ಅವರು ನೀಡುವ ಹೇಳಿಕೆಯ ಆಧಾರದ ಮೇಲೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಮುಂದಿನ ಕ್ರಮವನ್ನು ಕೈಗೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು. |
| **2017/10.22** | ಪ್ರೊ. ಹಕಿಮ್ ಅಲಿ ಸ್ಮರಣಾರ್ಥ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ದಾನಿಗಳು ದತ್ತಿಯ ನಿಬಂಧನೆಯಲ್ಲಿ ಕೋರಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು **MA in URDU** ಸ್ನಾತಕೋತ್ತರ ಪದವಿಯ **Dekhani Abad** ಪತ್ರಿಕೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾಗುವ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಂಬಂಧ "ಪ್ರೊ. ಹಕಿಮ್ ಅಲಿ ಸ್ಮರಣಾರ್ಥ" ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ಹಾಗೂ ಮುಂಬರುವ ಘಟಿಕೋತ್ಸವದಲ್ಲಿ ಅರ್ಹ ವಿದ್ಯಾರ್ಥಿಗೆ ಸದರಿ ಚಿನ್ನದ ಪದಕ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.23** | ಡಾ. ಬಾಬು ಜಗಜೀವನ ರಾಂ ಅಧ್ಯಯನ ಪೀಠ ಸ್ಥಾಪಿಸುವ ಸಂಬಂಧ ಸರ್ಕಾರದಿಂದ ಬಿಡುಗಡೆಯಾಗಲಿರುವ ಅನುದಾನವನ್ನು ಪಡೆಯಲು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು, ಇವರುಗಳ ಹೆಸರಿನಲ್ಲಿ ಜಂಟಿ ಖಾತೆ ತೆರೆದಿರುವ ಬಗ್ಗೆ – ಅನುಮರ್ಥನೆಗಾಗಿ. |
| ತೀರ್ಮಾನ | ಡಾ. ಬಾಬು ಜಗಜೀವನ ರಾಂ ಅಧ್ಯಯನ ಪೀಠ ಸ್ಥಾಪಿಸುವ ಸಂಬಂಧ ಸರ್ಕಾರದಿಂದ ಬಿಡುಗಡೆಯಾಗಿರುವ ರೂ.2ಕೋಟಿ ಮಂಜೂರಾಗಿದ್ದು, ಸದರಿ ಅನುದಾನವನ್ನು ಪಡೆಯಲು ಕರ್ನಾಟಕ ಸರ್ಕಾರ ಸಮಾಜ ಕಲ್ಯಾಣ ಇಲಾಖೆ ಇವರ ವತಿಯಿಂದ ಪಡೆಯುವ ಸಲುವಾಗಿ, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು, ಇವರುಗಳ ಹೆಸರಿನಲ್ಲಿ ಜಂಟಿ ಖಾತೆ ಸಂಖ್ಯೆ: 37131568175 ಯನ್ನು ಭಾರತೀಯ ಸ್ಟೇಟ್ ಬ್ಯಾಂಕ್, ವಿಶ್ವವಿದ್ಯಾನಿಲಯ ಆವರಣ ಶಾಖೆ ಇಲ್ಲಿ ತೆರೆದು, ಸದರಿ ಖಾತೆಯ ವ್ಯವಹಾರವನ್ನು ಹಣಕಾಸು ಅಧಿಕಾರಿಗಳು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಹಾಗೂ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಇವರುಗಳಿಂದ ನಿರ್ವಹಿಸಲು ಅನುಸರಿಸುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| | |
|---|---|
| **2017/10.24** | DRDO, ನವದೆಹಲಿ ಇವರಿಂದ ಬಿಡುಗಡೆಯಾಗಲಿರುವ ಅನುದಾನವನ್ನು ಪಡೆಯಲು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರ ಹೆಸರಿನಲ್ಲಿ ಖಾತೆ ತೆರೆದಿರುವ ಬಗ್ಗೆ – ಅನುಸಮರ್ಥನೆಗಾಗಿ |
| ತೀರ್ಮಾನ | ಡಾ. ರವಿಶಂಕರ್ ರೈ, ಪ್ರಾಧ್ಯಾಪಕರು, ಸೂಕ್ಷ್ಮ ಜೀವಾಣುಶಾಸ್ತ್ರ ಅಧ್ಯಯನ ವಿಭಾಗ ಇವರು DRDO, ನವದೆಹಲಿ ಇವರು ಅನುದಾನ ಬಿಡುಗಡೆ ಮಾಡಿರುವ ಅನುದಾನದಡಿ ಕೈಗೊಂಡಿರುವ ಯೋಜನೆಗೆ ಸಂಬಂಧಿಸಿದಂತೆ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಹೆಸರಿನಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್, ವಿಶ್ವವಿದ್ಯಾನಿಲಯ ಆವರಣ ಶಾಖೆ ಇಲ್ಲಿ ಖಾತೆಯನ್ನು ತೆರೆಯಲಾಗಿದ್ದು, ಖಾತೆ ಸಂ.37131570321ಗೆ ಸಂಬಂಧಿಸಿದ ವ್ಯವಹಾರವನ್ನು ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಕುಲಸಚಿವರ ಪರವಾಗಿ ಬ್ಯಾಂಕಿನ ವ್ಯವಹಾರ ನಿರ್ವಹಿಸಲು ಅನುಮತಿ ನೀಡುವಂತೆ ಸಿಂಡಿಕೇಟ್ ತೀರ್ಮಾನಿಸಿತು. |
| **2017/10.25** | ಥೈಲಾಂಡ್‌ನ ಥಮಾಸತ್ ವಿಶ್ವವಿದ್ಯಾನಿಲಯದ ಜೊತೆ ಶೈಕ್ಷಣಿಕ ವಿಚಾರದಲ್ಲಿ ಒಡಂಬಡಿಕೆ ಮಾಡಿಕೊಳ್ಳುವ ಕುರಿತು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಥೈಲಾಂಡ್‌ನ ಥಮಾಸತ್ ವಿಶ್ವವಿದ್ಯಾನಿಲಯದ ಸಹಭಾಗಿತ್ವದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿನಿಮಯ ಮಾಡಿಕೊಳ್ಳುವ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳಲು ಸದರಿ ವಿಶ್ವವಿದ್ಯಾನಿಲಯದ ಶಿಕ್ಷಣ ತಜ್ಞರು ದಿ.06-10-2017ರಂದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ, ಚರ್ಚಿಸಿದಂತೆ ಸಿದ್ಧಪಡಿಸಿ ಸಲ್ಲಿಸಿರುವ MOU ಒಡಂಬಡಿಕೆಯ ಪ್ರಸ್ತಾವನೆಯ ಕರಡು ಪ್ರತಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/10.26** | ಡಾ. ದಯಾನಂದ ಮಾನೆ, ಪ್ರಾಧ್ಯಾಪಕರು ಇವರು "ಕರ್ನಾಟಕದಲ್ಲಿ ಅಭಿವೃದ್ಧಿ ಆಡಳಿತ: ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಪಕ್ಷ ಆಡಳಿತದ ಒಂದು ವಿಶ್ಲೇಷಣೆ 2013" ಎಂಬ ಯೋಜನೆ (Project)ಗೆ ಆರ್ಥಿಕ ನೆರವು ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ದಯಾನಂದ ಮಾನೆ, ಪ್ರಾಧ್ಯಾಪಕರು ಇವರು "ಕರ್ನಾಟಕದಲ್ಲಿ ಅಭಿವೃದ್ಧಿ ಆಡಳಿತ: ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಪಕ್ಷ ಆಡಳಿತದ ಒಂದು ವಿಶ್ಲೇಷಣೆ 2013" ಎಂಬ ಯೋಜನೆಯನ್ನು ಕೈಗೊಳ್ಳುವ ಸಂಬಂಧ ರೂ.12,68,000/-ಗಳ ಆರ್ಥಿಕ ನೆರವು ಕೋರಿರುವುದನ್ನು ಪರಿಶೀಲಿಸಿದ ಸಿಂಡಿಕೇಟ್ ವಿಶ್ವವಿದ್ಯಾನಿಲಯದ ಮಾರ್ಗಸೂಚಿಯನ್ವಯ ವಿಶ್ವವಿದ್ಯಾನಿಲಯವು ನೀಡಲಾಗುವ ಅನುದಾನವು ಕ್ರಮವಾಗಿ ವಿಜ್ಞಾನ ವಿಭಾಗಕ್ಕೆ ರೂ. 1.00 ಲಕ್ಷ ಹಾಗೂ ಕಲಾ ವಿಭಾಗಕ್ಕೆ ರೂ. 50,000/-ಗಳಿಗೆ ಸೀಮಿತಗೊಂಡಿರುವುದರಿಂದ ಮತ್ತು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜಿನಲ್ಲಿ ಅವಕಾಶವಿರುವುದಿಲ್ಲವಾದ್ದರಿಂದ ಸದರಿ ಯೋಜನೆಗೆ ಆರ್ಥಿಕ ನೆರವನ್ನು ನೀಡದಿರಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.27** | ಸಂಖ್ಯಾಶಾಸ್ತ್ರ ಮತ್ತು ಪ್ರಾಚೀನ ಇತಿಹಾಸ ಪುರಾತತ್ವಶಾಸ್ತ್ರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಿಸುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಜೇಷ್ಠತೆಯ ಆಧಾರದ ಮೇಲೆ ಕ್ರಮವಾಗಿ ಪ್ರೊ. ರವಿ, ಇವರನ್ನು ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ಹಾಗೂ ಡಾ. ಕೆ.ಪ್ರಭು, ಸಹಾಯಕ ಪ್ರಾಧ್ಯಾಪಕರು ಇವರನ್ನು ಪ್ರಾಚೀನ ಇತಿಹಾಸ ಪುರಾತತ್ವ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2017/10.28** | ಪ್ರೊ. ಬಿ. ಶಿವರಾಜು, ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿರುವ ಸಿಂಡಿಕೇಟ್ ನಿರ್ಣಯವನ್ನು ರದ್ದುಗೊಳಿಸಿರುವ ಬಗ್ಗೆ. |
| **ತೀರ್ಮಾನ** | ಪ್ರೊ. ಬಿ. ಶಿವರಾಜು, ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿರುವ ಸಿಂಡಿಕೇಟ್ ನಿರ್ಣಯವು ನಿಯಮಬಾಹಿರ-ವಾಗಿದೆಯೆಂದು ತಿಳಿಸಿ ಸರ್ಕಾರವು ತನ್ನ ಆದೇಶದಲ್ಲಿ ಸದರಿ ನಿರ್ಣಯವನ್ನು ದಿನಾಂಕ 12.06.2017ರಲ್ಲಿ ರದ್ದುಗೊಳಿಸಿದ ಹಿನ್ನೆಲೆಯಲ್ಲಿ ಪ್ರೊ. ಬಿ. ಶಿವರಾಜು ಅವರನ್ನು ಮರುನೇಮಕ ಮಾಡಿಕೊಳ್ಳಲಾಗಿದೆ. ಅದರಂತೆ ಕಡ್ಡಾಯ ನಿವೃತ್ತಿಗೊಳಿಸಿದ ದಿನ ಮತ್ತು ಕರ್ತವ್ಯಕ್ಕೆ ಪುನಃ ವರದಿ ಮಾಡಿಕೊಂಡ ಮಧ್ಯದ ಅವಧಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಪರಿನಿಯಮಾವಳಿಯಂತೆ ನಿಯಮಾನುಸಾರ ಪರಿಶೀಲಿಸಿ ತಮ್ಮ ಹಂತದಲ್ಲಿಯೇ ಕ್ರಮತೆಗೆದುಕೊಳ್ಳುವಂತೆ ಸರ್ಕಾರವು ವಿಶ್ವವಿದ್ಯಾನಿಲಯಕ್ಕೆ ತಿಳಿಸಿರುವುದರಿಂದ ಈ ಕುರಿತು ಕೆ.ಸಿ.ಎಸ್.ಆರ್. ನಿಯಮ 99(3) 99ಎ(35)ರ ಪ್ರಕಾರ ಕ್ರಮಕ್ಕೆಗೊಳ್ಳುವ ಸಂಬಂಧ ಕಾನೂನು ಸಲಹೆಗಾರರ ಅಭಿಪ್ರಾಯಪಡೆದು ಅದರಂತೆ ಕ್ರಮತೆಗೆದುಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.29** | ಶ್ರೀ ಎಂ.ಎಂ. ಶ್ರೀಕಂಠಸ್ವಾಮಿ, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಸಂಬಂಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| **ತೀರ್ಮಾನ** | ಶ್ರೀ ಎಂ.ಎಂ. ಶ್ರೀಕಂಠಸ್ವಾಮಿ, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಪದೇ ಪದೇ ಕಛೇರಿ ಕೆಲಸಕ್ಕೆ ಗೈರುಹಾಜರಾಗುತ್ತಿದ್ದು, ಇವರು ಕಾರಣ ನೀಡುವ ನೋಟೀಸ್‌ಗೆ ವೈದ್ಯರ ಪ್ರಮಾಣ ಪತ್ರ ಸಲ್ಲಿಸಿರುವುದರಿಂದ ಪ್ರಮಾಣಪತ್ರದ ಬಗ್ಗೆ ಮೆಡಿಕಲ್ ಬೋರ್ಡ್‌ನಿಂದ ಪರಿಶೀಲನೆಗೆ ಕಳುಹಿಸಿ ಮಾಹಿತಿಯನ್ನು ಪಡೆಯಲು ಹಾಗೂ ಸದರಿಯವರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರನ್ನು ವಿಚಾರಣಾಧಿಕಾರಿಯಾಗಿ ಹಾಗೂ ಉಪಕುಲಸಚಿವ(ಸಾಮಾನ್ಯ) ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.30** | ಡಾ. ಚಂದಾವರ ವಿದ್ಯಾ ಆರ್., ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು ಇವರ ವಿರುದ್ಧ ನಡೆದ ಇಲಾಖಾ ವಿಚಾರಣೆಯ ಅಂತಿಮ ವರದಿಯನ್ನು ನೀಡಿರುವ ಬಗ್ಗೆ. |
| **ತೀರ್ಮಾನ** | ಡಾ.ಚಂದಾವರ ವಿದ್ಯಾ ಆರ್, ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು ಇವರ ವಿರುದ್ಧ ನಡೆದ ಇಲಾಖೆಯ ವಿಚಾರಣೆಯ ವರದಿಗೆ ಸಂಬಂಧಿಸಿದಂತೆ ಡಾ.ಚಂದಾವರ ವಿದ್ಯಾ ಆರ್. ಇವರಿಂದ ವಿವರಣೆ ಪಡೆದು ನಿಯಮಾನುಸಾರ ಕ್ರಮಕ್ಕೈಗೊಳ್ಳುವ ಸಲುವಾಗಿ ಮುಂದಿನ ಸಿಂಡಿಕೇಟ್‌ನಲ್ಲಿ ಮಂಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.31** | "Center for study social Exclusion and Inclusive policy"ಕೇಂದ್ರವನ್ನು ಮುಂದುವರೆಸುವ ಬಗ್ಗೆ. |
| **ತೀರ್ಮಾನ** | ದಿನಾಂಕ 29-03-2017ರಂದು ಯುಜಿಸಿ ಹೊರಡಿಸಿರುವ ಸಾರ್ವಜನಿಕ ನೋಟಿಸ್‌ನ ಅನುಸಾರ, "Center for Study of Social Exclusion and Inclusive Policy"ಕೇಂದ್ರವನ್ನು ಮತ್ತು ಸದರಿ ಕೇಂದ್ರದಲ್ಲಿನ ಸಿಬ್ಬಂದಿಗಳ ಸೇವೆಯನ್ನು ದಿನಾಂಕ 31-03-2019ರವರೆಗೆ ಮುಂದುವರೆಸುವ ವಿಷಯವನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/10.32** | ಸ್ನಾತಕೋತ್ತರ ಪದವಿ ಕೋರ್ಸ್‌ಗಳ ತರಗತಿಗಳನ್ನು ಬೋಧಿಸುತ್ತಿರುವ ಅಧ್ಯಾಪಕರುಗಳನ್ನು ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಿಕೊಳ್ಳುವ ಬಗ್ಗೆ. |
| ತೀರ್ಮಾನ | ಸ್ನಾತಕೋತ್ತರ ಪದವಿ ಕೋರ್ಸ್‌ಗಳ ತರಗತಿಗಳನ್ನು ಬೋಧಿಸುತ್ತಿರುವ ಅಧ್ಯಾಪಕರುಗಳನ್ನು ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಿಕೊಳ್ಳುವ ಸಂಬಂಧದಿನಾಂಕ 05-08-2017ರಂದು ನಡೆದ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಪೂರ್ಣಕಾಲಿಕವಾಗಿ ತರಗತಿಗಳನ್ನು ಬೋಧಿಸುತ್ತಿದ್ದು, 3 ವರ್ಷ ಸೇವಾನುಭವ ಹೊಂದಿರುವ ಅಧ್ಯಾಪಕರುಗಳನ್ನು ಮಾತ್ರ ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಿಕೊಳ್ಳಲು ತೀರ್ಮಾನಿಸಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2017/10.33** | ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವತಿಯಿಂದ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ನಿವೇಶನವನ್ನು ಉಚಿತವಾಗಿ ಒದಗಿಸಿಕೊಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ವತಿಯಿಂದ ಈಗಾಗಲೇ ಎರಡು ಕಡೆ ಕಟ್ಟಡ ನಿರ್ಮಾಣಕ್ಕಾಗಿ ಜಾಗವನ್ನು ನೀಡಲಾಗಿರುವುದರ ಬಗ್ಗೆ ಚರ್ಚಿಸಿದ ಸಭೆಯು ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವತಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ನಿವೇಶನವನ್ನು ಉಚಿತವಾಗಿ ಒದಗಿಸಿಕೊಡುವ ಬಗ್ಗೆ ಕಾರ್ಯಪಾಲಕ ಅಭಿಯಂತರರಿಂದ ಸ್ಥಳ ಕೋರಿರುವಷ್ಟು ಅಗತ್ಯ ಜಾಗದ ಬಗೆಗೆ ಪರಿಶೀಲನೆ ನಡೆಸಿ, ಗುರುತಿಸಿದ ಜಾಗದ ಬಗ್ಗೆ ವರದಿ ಪಡೆದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುವ ಅಲ್ಪಸಂಖ್ಯಾತ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಕಲ್ಪಿಸಬೇಕೆಂಬ ಷರತ್ತಿಗೊಳಪಟ್ಟು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 3(4)ರ ಪ್ರಕಾರ, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವತಿಯಿಂದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ಪ್ರತ್ಯೇಕವಾಗಿ ನಿವೇಶನವನ್ನು ಒದಗಿಸಿಕೊಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.34** | ಕೌಸರ್ ಜಮಲ್ ರವರಿಗೆ ಇತರೆ ಹಿಂದುಳಿದ ವರ್ಗದ ಕೋಟಾದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕೋಟಕ್ಕೆ ಪಿಹೆಚ್.ಡಿ ತಾತ್ಕಾಲಿಕ ನೊಂದಣಿಯನ್ನು ನೀಡಬೇಕೆಂದು ಕೋರಿರುವ ಬಗ್ಗೆ. |
| ತೀರ್ಮಾನ | ಕೌಸರ್ ಜಮಲ್ ರವರು ಇತರೆ ಹಿಂದುಳಿದ ವರ್ಗದ ಕೋಟಾದ ವಿದ್ಯಾರ್ಥಿಯಾಗಿದ್ದು ಖಾಲಿಯಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕೋಟಾ ದಡಿಯಲ್ಲಿ ಪಿಹೆಚ್.ಡಿ ತಾತ್ಕಾಲಿಕ ನೊಂದಣಿಯನ್ನು ನೀಡಬೇಕೆಂದು ಕೋರಿರುವುದನ್ನು ಪರಿಶೀಲಿಸಿದ ಸಭೆಯು ನಿಯಮಾನುಸಾರ ಈ ರೀತಿ ನೀಡಲು ಬರುವುದಿಲ್ಲವಾದ್ದರಿಂದ ಸದರಿಯವರ ಕೋರಿಕೆಯನ್ನು ತಿರಸ್ಕರಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.35** | Ahamad Mehrali Dastjerdi ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | Ahamad Mehrali Dastjerdi, ಸಂಶೋಧನಾ ಅಭ್ಯರ್ಥಿ, ಆಂಗ್ಲ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಸಂಶೋಧನಾ ಅವಧಿಯು ದಿನಾಂಕ 21-10-2017ಕ್ಕೆ 07 ವರ್ಷಗಳು ಪೂರ್ಣಗೊಂಡು, ನಿಯಮಾವಳಿಯ ಪ್ರಕಾರ ತಂತಾನೇ ರದ್ದುಗೊಂಡಿರುತ್ತದೆ. ಸದರಿ ಅಭ್ಯರ್ಥಿಯು ದಿನಾಂಕ 12-10-2017 ರಂದು Low Back Pain and Vertebral Jointsಗಳಲ್ಲಿ ತೊಂದರೆಯಾಗಿದೆಯೆಂದು ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಿರುವುದರಿಂದ ಸಭೆಯು ಇವರ ಮನವಿಯನ್ನು ಮಾನವೀಯತೆಯ ದೃಷ್ಟಿಯಿಂದ ರೂ.50,000/-ಗಳ ದಂಡಶುಲ್ಕವನ್ನು ವಿಧಿಸಿ ಆರು ತಿಂಗಳ ಅವಧಿಯ ವಿಸ್ತರಣೆಗೆ ಅವಕಾಶವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.36** | 2017-18ನೇ ಶೈಕ್ಷಣಿಕ ಸಾಲಿನಲ್ಲಿ ನಡೆದ ಎಲ್ಲಾ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗಳನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | 2017-18ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಸೀಟುಗಳನ್ವಯ (Seat Matrix) ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಪ್ರವೇಶಾತಿಯನ್ನು ಮಾಡಿಕೊಂಡಿರುವ ವಿಷಯವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| | |
|---|---|
| **2017/10.37** | ಡಾ. ಬಸಪ್ಪ, ಸಹಾಯಕ ಪ್ರಾಧ್ಯಾಪಕರು, ಆರ್ಗಾನಿಕ್ ಕೆಮಿಸ್ಟ್ರಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ವಿಶ್ವವಿದ್ಯಾನಿಲಯದ ಉಪಕುಲಸಚಿವ ಹುದ್ದೆಗೆ ನಿಯೋಜಿಸುವುದರ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಉಪಕುಲಸಚಿವ ಹುದ್ದೆಯ ವೃಂದ ಮತ್ತು ನೇಮಕಾತಿಯ ಅಧಿನಿಯಮದಲ್ಲಿ **"25% of posts of Deputy Registrar/ Deputy Registrar(Evaluation) shall be filled up by deputation from among Teachers possessing at least 08 years of Teaching Experience either in the Post-graduate Departments orin Constituent Colleges of the University of Mysore"**ಎಂದಿದ್ದು ಉಪಕುಲಸಚಿವರ ಒಟ್ಟು 08 ಹುದ್ದೆಗಳಲ್ಲಿ ಈಗಾಗಲೇ ಇಬ್ಬರು ಅಧ್ಯಾಪಕರು ಉಪಕುಲಸಚಿವ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಮತ್ತು ಅಧಿನಿಯಮಗಳನ್ವಯ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 08 ವರ್ಷಗಳ ಸೇವೆ ಸಲ್ಲಿಸದೇ ಇರುವುದಲ್ಲದೇ ಇತ್ತೀಚೆಗೆ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಮೈಸೂರು ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ಅಧ್ಯಯನ ವಿಭಾಗದಿಂದ ಸ್ಥಳಾಂತರಗೊಂಡ ಹುದ್ದೆಯ ಎದುರಿಗೆ ನೇಮಕವಾಗಿರುವ ಉದ್ದೇಶದ ಉಲ್ಲಂಘನೆಯಾಗುವುದನ್ನು ಗಮನಿಸಿದ ಸಿಂಡಿಕೇಟ್ ಡಾ. ಬಸಪ್ಪ, ಸಹಾಯಕ ಪ್ರಾಧ್ಯಾಪಕರು, ಆರ್ಗಾನಿಕ್ ಕೆಮಿಸ್ಟ್ರಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ವಿಶ್ವವಿದ್ಯಾನಿಲಯದ ಉಪಕುಲಸಚಿವ ಹುದ್ದೆಗೆ ನಿಯೋಜನೆಗೊಳಿಸದಿರಲು ತೀರ್ಮಾನಿಸಿತು. |
| **2017/10.38** | ಶ್ರೀ ವಿ. ಶ್ರೀನಿವಾಸ್, ಪ್ರಥಮ ದರ್ಜೆ ಗುಮಾಸ್ತರು, ಆಡಳಿತ ಶಾಖೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| **ತೀರ್ಮಾನ** | ಶ್ರೀ ವಿ. ಶ್ರೀನಿವಾಸ್, ಪ್ರಥಮ ದರ್ಜೆ ಗುಮಾಸ್ತರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಅಧಿಕಾರಿಗಳಿಗೆ ಹಂಚಿಕೆ ಮಾಡಿರುವ ವಾಹನಗಳಲ್ಲಿ ಮೂರು ವಾಹನಗಳ ವಾರ್ಷಿಕ ವಿಮೆಯನ್ನು ಕಳೆದ ಎರಡು ವರ್ಷಗಳಿಂದ ನವೀಕರಿಸದೇ ಇರುವುದು ಮತ್ತು ವಾಹನಗಳನ್ನು ಸಕಾಲದಲ್ಲಿ ಹರಾಜು ಮಾಡದೇ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದರಿಂದ ಸದರಿಯವರನ್ನು ದಿ.12.10.2017ರಂದು ಅಮಾನತ್ತಿನಲ್ಲಿರಿಸಲಾಗಿರುವುದನ್ನು ಸಭೆಯು ಅನುಸಮರ್ಥಿಸಿತು ಮತ್ತು ಸದರಿಯವರಿಗೆ ವಿಶ್ವವಿದ್ಯಾನಿಲಯದಲ್ಲಿ ಸೇವೆ ಮಾಡಲು (revoke) ಅವಕಾಶ ಕಲ್ಪಿಸಿ ಇನ್ನೂ ಮುಂದೆ ಕಛೇರಿ ಕೆಲಸದಲ್ಲಿ ನಿರ್ಲಕ್ಷ್ಯ ವಹಿಸದಂತೆ ಮತ್ತೊಮ್ಮೆ ಎಚ್ಚರಿಕೆ ನೀಡಿ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.39** | ಪ್ರೊ. ಸಿ.ಪಿ. ಸುನೀತ, ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರಿಗೆ ಇಂಡೋನೇಶಿಯಾದ ಬಾಲಿ ದೇಶಕ್ಕೆ ಹೋಗಿಬರಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | ಪ್ರೊ. ಸಿ.ಪಿ. ಸುನೀತ, ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಲಲಿತಕಲಾ ಮೈಸೂರು, ದಿನಾಂಕ: 14-11-2017ರಿಂದ 20-11-2017ರವರೆಗೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ಹಾಗೂ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆ ಇಲ್ಲದಂತೆ ಇವರು ಸ್ವಂತ ಕೆಲಸ ನಿಮಿತ್ತ ಬಾಲಿ ದೇಶಕ್ಕೆ ಹೋಗಿಬರಲು ಸಿಂಡಿಕೇಟ್ ಅನುಮತಿಸಿತು. |
| **2017/10.40** | ಶ್ರೀ ಎಂ.ಎಸ್.ಎಸ್. ಕುಮಾರ್, ಸಿಂಡಿಕೇಟ್ ಸದಸ್ಯರು, ಇವರು ಬಿ.ಓ.ಎಸ್‌ಗೆ ಸಂಬಂಧಿಸಿದಂತೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ. |
| **ತೀರ್ಮಾನ** | ಶ್ರೀ ಎಂ.ಎಸ್.ಎಸ್. ಕುಮಾರ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯ ವಿಭಾಗಗಳ ಪ್ರಾಧ್ಯಾಪಕರುಗಳ ಸೇವಾ ಹಿರಿತನವನ್ನು ಪರಿಗಣಿಸದೆ, ಅಧ್ಯಯನ ಮಂಡಳಿಯ ಅಧಿನಿಯಮವನ್ನು ಉಲ್ಲಂಘಿಸಿ ನೇಮಕ ಮಾಡಿರುವ ಅಧ್ಯಯನ ಮಂಡಳಿಗಳ ಸದಸ್ಯರುಗಳನ್ನು ಮರು ಪರಿಶೀಲಿಸಿ ಪುನರ್ ರಚಿಸುವಂತೆ ಪ್ರಸ್ತಾಪಿಸಿರುವ ಹಿನ್ನೆಲೆಯಲ್ಲಿ, ಅಧ್ಯಯನ ಮಂಡಳಿಯ ಅಧಿನಿಯಮಗಳನ್ವಯ ಮಾನ್ಯ ಕುಲಪತಿಯವರು ತಮಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧ್ಯಯನ ಮಂಡಳಿಯ ಅಧ್ಯಕ್ಷರು/ಸದಸ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2017/10.41** | Conduct of re-enquiry against 23 students – placing the report before the Syndicate – reg. |
| ತೀರ್ಮಾನ | Sec.77(1) of KSU Act, 2000 ರ ಪ್ರಕಾರ 23 ವಿದ್ಯಾರ್ಥಿಗಳ ವಿರುದ್ಧ ಮರು ವಿಚಾರಣೆ ನಡೆಸಲು ವಿಶ್ವವಿದ್ಯಾನಿಲಯದಿಂದ ನೇಮಕಗೊಂಡಿರುವ ವಿಚಾರಣಾ ಅಧಿಕಾರಿಯಾಗಿ, ಶ್ರೀ.ಆರ್.ವೆಂಕಟೇಶ್, ನಿವೃತ್ತ ಸೆಸನ್ಸ್ ನ್ಯಾಯಾಧೀಶರು ಹಾಗೂ Presenting Officer ಆಗಿ ಶ್ರೀ.ಬಿ.ಜಿ.ಪ್ರಸಾದ್, ವಕೀಲರು ಇವರುಗಳು ನೀಡಿರುವ ವಿಚಾರಣಾ ವರದಿಯನ್ನು ಸಿಂಡಿಕೇಟ್ ಅಂಗೀಕರಿಸಿತು ಹಾಗೂ ವಿಚಾರಣಾ ವರದಿಯ ಬಗ್ಗೆ ಸದರಿ ವಿದ್ಯಾರ್ಥಿಗಳಿಗೆ ಒಂದು ಅವಕಾಶವನ್ನು ನೀಡಿ, ಅವರಿಂದ ವಿವರಣೆಪಡೆದು ಮುಂದಿನ ಕ್ರಮ ಕೈಗೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು. |
| **2017/10.42** | ಮೈಸೂರು ಸಿಟಿ ಕುರುಬಾರಹಳ್ಳಿಯಲ್ಲಿರುವ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಜಮೀನಿನ ವಿವಾದಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ಎಸ್.ಎಲ್.ಪಿ. ಪ್ರಕರಣದಲ್ಲಿ ಹಿರಿಯ ವಕೀಲರನ್ನು ನೇಮಿಸಿಕೊಳ್ಳುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಕೋಟ್ಯಂತರ ರೂಪಾಯಿಗಳ ಆಸ್ತಿಯನ್ನು ರಕ್ಷಿಸಿಕೊಳ್ಳುವಲ್ಲಿ, ವಿಶ್ವವಿದ್ಯಾನಿಲಯದ ಪರವಾಗಿ ಪರಿಣಾಮಕಾರಿಯಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ವಾದ ಮಂಡಿಸಲು ಹಿರಿಯ ವಕೀಲರನ್ನು ನೇಮಿಸಿಕೊಳ್ಳಲು ವಿಶ್ವವಿದ್ಯಾನಿಲಯದ ನಿರ್ಧಾರವನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/10.43** | ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ. |
| ತೀರ್ಮಾನ | ಪ್ರೊ.ಬಿ.ಮಹದೇವಪ್ಪ, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಇವರು ಹಣಕಾಸು ಅಧಿಕಾರಿಗಳಾಗಿ ಈಗಾಗಲೇ ಮೂರು ವರ್ಷಗಳಿಗಿಂತ ಮಿಗಿಲಾಗಿ ಹಣಕಾಸು ಅಧಿಕಾರಿಗಳ ಹುದ್ದೆಯಲ್ಲಿ ಸೇವೆಸಲ್ಲಿಸುತ್ತಿರುವುದನ್ನು ಗಮನಿಸಿದ ಸಿಂಡಿಕೇಟ್ ಇವರ ಬದಲಿಗೆ ಬೇರೊಬ್ಬರನ್ನು ಹಣಕಾಸು ಅಧಿಕಾರಿಗಳನ್ನಾಗಿ ಈ ಸಂದರ್ಭದಲ್ಲಿ ನಿಯೋಜಿಸಿದರೆ, ಸರ್ಕಾರದ ಹಣಕಾಸು ಲೆಕ್ಕ ಪತ್ರ ವಿಭಾಗಕ್ಕೆ ವಿಶ್ವವಿದ್ಯಾನಿಲಯದ ವರದಿಯನ್ನು ಸಲ್ಲಿಸಲು ತೊಂದರೆಯಾಗುವುದರಿಂದ ಹಣಕಾಸು ಅಧಿಕಾರಿಗಳಾಗಿ ಮುಂದಿನ ಆದೇಶ ನೀಡುವರೆಗೆ ಕಾರ್ಯನಿರ್ವಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.44** | ಗುಬ್ಬಿ ವೀರಣ್ಣ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಗುಬ್ಬಿ ವೀರಣ್ಣ ಪೀಠಕ್ಕೆ ಈ ಕೆಳಗೆ ಹೆಸರಿಸಿರುವ ತಜ್ಞರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಅಧಿನಿಯಮಾನುಸಾರ ಒಂದು ವರ್ಷದ ಅವಧಿಗೆ ರೂ.8,000/–ಗಳ ಗೌರವಧನದೊಂದಿಗೆ ನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು.<br>Prof. Sudheendra Sharma<br># 229, Garden Villas, Maruti Nagar<br>Nagarabhavi Road<br>Bengaluru - 560 017 |
| **2017/10.45** | Proposal of detailed expenditure for conduct of KSET Examination during December 2017 |
| ತೀರ್ಮಾನ | 2017ನೇ ಡಿಸೆಂಬರ್ ತಿಂಗಳಲ್ಲಿ ನಡೆಯುವ ಕೆ.ಸೆಟ್ ಪರೀಕ್ಷೆ ಕಾರ್ಯಚಟುವಟಿಕೆಗಳಿಗಾಗಿ ತಗಲುವ ಅಂದಾಜು ವೆಚ್ಚಗಳುಳ್ಳ ಪ್ರಸ್ತಾವನೆಯನ್ನು ಸಿಂಡಿಕೇಟ್ ಅಂಗೀಕರಿಸಿತು ಹಾಗೂ ಪರೀಕ್ಷಾ ಕಾರ್ಯಕ್ಕೆ ಸಂಬಂಧಪಟ್ಟಂತೆ ನಿಯೋಜನೆಗೊಂಡಿರುವವರಿಗೆ 2016–17ನೇ ಸಾಲಿನಲ್ಲಿ ನಿಗಧಿಪಡಿಸಿರುವ ಸಂಭಾವನೆಯನ್ನು ಮುಂದುವರಿಸಿಕೊಂಡು ಹೋಗುವಂತೆ ಕೆ.ಸೆಟ್ ಸಂಯೋಜಕರಿಗೆ ನಿರ್ದೇಶನ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2017/10.46** | ಸರ್. ಎಂ. ವಿಶ್ವೇಶ್ವರಯ್ಯ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | ಸರ್ ಎಂ.ವಿಶ್ವೇಶ್ವರಯ್ಯ ಪೀಠದ ಅಧಿನಿಯಮದನ್ವಯ ಸರ್.ಎಂ.ವಿಶ್ವೇಶ್ವರಯ್ಯ ಪೀಠಕ್ಕೆ ಈ ಕೆಳಗೆ ಹೆಸರಿಸಿರುವ ತಜ್ಞರನ್ನು ರೂ.8,000/-ಗಳ ಗೌರವಧನದೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆದ್ಯತಾನುಸಾರವಾಗಿ ನಿಯಮಾನುಸಾರ 01 ವರ್ಷದ ಅವಧಿಗೆ ನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. ಒಂದು ವೇಳೆ ನೇಮಕಗೊಂಡ ಸಂದರ್ಶಕ ಪ್ರಾಧ್ಯಾಪಕರು ವಿಶ್ವವಿದ್ಯಾನಿಲಯದ ಆಹ್ವಾನವನ್ನು ಪರಿಗಣಿಸದಿದ್ದ ಪಕ್ಷದಲ್ಲಿ ಮುಂದಿನ ಸರದಿಯಲ್ಲಿ ಆದ್ಯತಾನುಸಾರ ಹೆಸರಿಸಿರುವ ಮತ್ತೊರ್ವ ತಜ್ಞರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ತೀರ್ಮಾನಿಸಿತು.<br><br>1. Prof. M.S.Hegde<br>Scientist (Rtd.)<br>SSCU, IISC, Bangalore<br>2. Dr. S.P.Meenakshisundaram<br>Professor (Rtd.,)<br>Annamalai University<br>Annamalainagar – 608 002 |
| **2017/10.47** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲಾಗುವ ದೂರಶಿಕ್ಷಣ (Distance Education Programme) ಕೋರ್ಸ್‌ಗಳಿಗೆ ಶುಲ್ಕವನ್ನು ಮತ್ತು ದೂರಶಿಕ್ಷಣ ನಿರ್ವಹಣೆಗಾಗಿ ವಿಶ್ವವಿದ್ಯಾನಿಲಯದ ಆಯವ್ಯಯದ ಅಂದಾಜಿನಲ್ಲಿ ಅನುದಾನ ನಿಗದಿಪಡಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲಾಗುವ ದೂರಶಿಕ್ಷಣ (Distance Education Programme) ಕೋರ್ಸ್‌ಗಳಿಗೆ ಯುಜಿಸಿಯಿಂದ ಮಾನ್ಯತೆ ಪಡೆಯಲು ಅಕ್ಟೋಬರ್ 31ರೊಳಗೆ ಅರ್ಜಿಯನ್ನು ಅಪ್‌ಲೋಡ್ ಮಾಡಬೇಕಾಗಿರುವುದರಿಂದ ಇದಕ್ಕೆ ಸಂಬಂಧವಾಗಿ ವಿವಿಧ ದೂರಶಿಕ್ಷಣ ಪದವಿಗಳಿಗೆ ಶುಲ್ಕಗಳನ್ನು ನಿಗದಿಪಡಿಸಲು ಸಭೆಯು ಈ ಕೆಳಕಂಡಂತೆ ತೀರ್ಮಾನಿಸಿತು.<br>1. ದೂರಶಿಕ್ಷಣ ಮುಖೇನ ಪ್ರಾರಂಭಿಸಲಾಗುವ ಯುಜಿ ಮತ್ತು ಪಿಜಿ ಕೋರ್ಸ್‌ಗಳಿಗೆ ವಿಶ್ವವಿದ್ಯಾನಿಲಯವು ತನ್ನ ರೆಗ್ಯುಲರ್ ಯುಜಿ ಮತ್ತು ಪಿಜಿ ಕೋರ್ಸ್‌ಗಳಿಗೆ ನಿಗದಿಪಡಿಸಲಾಗಿರುವ ಶುಲ್ಕಗಳನ್ನೇ ನಿಗಧಿಪಡಿಸಿ, ಜೊತೆಗೆ ಯುಜಿ ಮತ್ತು ಪಿಜಿ ಕೋರ್ಸ್‌ಗಳಿಗೆ ಕ್ರಮವಾಗಿ ರೂ.600/- ಮತ್ತು 1,000/-ಗಳನ್ನು ಇ-ಬುಕ್‌ಗೆಂದು ಹಾಗೂ ರೂ.1,400/- ಮತ್ತು 2,000/-ಗಳನ್ನು ಪ್ರಿಂಟೆಡ್ ಮೇಟಿರಿಯಲ್‌ಗೆಂದು ಸೇರಿಸಿ ನಿಗದಿಪಡಿಸುವುದು.<br>2. ದೂರಶಿಕ್ಷಣ ಸಲುವಾಗಿ ಸರ್ವೀಸ್ ಪ್ರೊವೈಡರ್ ಅನ್ನು ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಮುಖೇನ ಪಡೆಯುವುದು.<br>3. ದೂರಶಿಕ್ಷಣ ಸಲುವಾಗಿ ವಿಶ್ವವಿದ್ಯಾನಿಲಯದಿಂದ ಎಲ್ಲಾ ರೀತಿಯ ಅವಶ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.<br>4. ಆನ್‌ಲೈನ್‌ನಲ್ಲಿ ಲಭ್ಯವಿಲ್ಲದಿರುವ ಕೋರ್ಸ್‌ಗಳಾದ ಬಿಎ ಮತ್ತು ಎಂ.ಎ (ರಾಜಕೀಯ ಶಾಸ್ತ್ರ, ಇತಿಹಾಸ, ಸೋಸಿಯಾಲಜಿ, ಅರ್ಥಶಾಸ್ತ್ರ, ಕನ್ನಡ, ಇಂಗ್ಲೀಷ್ ಮತ್ತು ಸಾರ್ವಜನಿಕ ಆಡಳಿತ) ಇವುಗಳಿಗೆ ಸಂಬಂಧಪಟ್ಟಂತೆ ಆಯಾ ಅಧ್ಯಯನ ಮಂಡಳಿಗಳ ಮೂಲಕ ಪಠ್ಯಗಳನ್ನು ರಚಿಸಲು ಅನುಮತಿ ನೀಡುವುದು.<br>5. ದೂರಶಿಕ್ಷಣಕ್ಕೆ ಸಂಬಂಧಪಟ್ಟಂತೆ ಇರುವ ಮೇಲಿನ ಎಲ್ಲ ಕಾರ್ಯಗಳ ಜೊತೆಗೆ ದೂರಶಿಕ್ಷಣ ನಿರ್ವಹಣೆ ಕುರಿತ ತಕ್ಷಣದ ಅಗತ್ಯಗಳಿಗೆ ತಗಲುವ ವೆಚ್ಚವನ್ನು ಭರಿಸುವುದರ ಸಲುವಾಗಿ ವಾರ್ಷಿಕ ರೂ.2.00 ಕೋಟಿಗಳನ್ನು ವಿಶ್ವವಿದ್ಯಾನಿಲಯದಲ್ಲಿ ಆಯವ್ಯಯದ 2017-18ನೇ ಸಾಲಿನ ಅಂದಾಜಿನಲ್ಲಿ ನಿಗಧಿಪಡಿಸುವುದು. |

| | |
|---|---|
| **2017/10.48** | ಮೈಸೂರು ವಿಶ್ವವಿದ್ಯಾನಿಲಯದ ಬೋಧಕ ಮತ್ತು ಬೋಧಕೇತರ ವರ್ಗದವರು ಹಾಗೂ ವಿದ್ಯಾರ್ಥಿಗಳು ಅಧಿಕೃತವಾಗಿ ಉಪಯೋಗಿಸುವ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳಿಗೆ "ಸುರಕ್ಷತಾ" ವಿಧಾನಗಳ ಸ್ಟಿಕ್ಕರ್‌ಗಳನ್ನು ಅಳವಡಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣ ಹಾಗೂ ಮಹಾರಾಜ/ಯುವರಾಜ ಕಾಲೇಜು ಆವರಣಕ್ಕೆ ಸುತ್ತಲೂ ಕಾಂಪೌಂಡ್ ಗೋಡೆ ಮತ್ತು ಗೇಟ್‌ಗಳನ್ನು ಅಳವಡಿಸಲಾಗಿದ್ದು, ಸದರಿ ದ್ವಾರಗಳ ನಿಯಂತ್ರಣಕ್ಕೆ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದರೂ ಸಾರ್ವಜನಿಕರು ಮತ್ತು ಇತರೆ ವಾಹನಗಳು ವಿಶ್ವವಿದ್ಯಾನಿಲಯದ ಆವರಣದ ರಸ್ತೆಯಲ್ಲಿ ತಿರುಗಾಡುತ್ತಿದ್ದು, ಶೈಕ್ಷಣಿಕ ವಾತಾವರಣಕ್ಕೆ ತೊಂದರೆಯಾಗಿರುತ್ತದೆ. ಅದೇ ರೀತಿ ಮಾನಸಗಂಗೋತ್ರಿಯ ಕ್ಯಾಂಪಸ್‌ನಲ್ಲೂ ಸಹ ಸಾರ್ವಜನಿಕ ವಾಹನಗಳನ್ನು ನಿಯಂತ್ರಿಸುವುದು ಅನಿವಾರ್ಯವಾಗಿರುವುದರಿಂದ ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ, ಬೋಧಕೇತರ ವರ್ಗದವರು ಮತ್ತು ವಿದ್ಯಾರ್ಥಿಗಳು ಉಪಯೋಗಿಸುವ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳಿಗೆ ಸ್ಟಿಕರ್‌ಗಳನ್ನು ಅಳವಡಿಸಿದಲ್ಲಿ ಭದ್ರತಾ ಸಿಬ್ಬಂದಿಯವರಿಗೆ ಇಂತಹ ವಾಹನಗಳಿಗೆ ಮಾತ್ರ ಪ್ರವೇಶ ದ್ವಾರಗಳಲ್ಲಿ ಅವಕಾಶ ಕಲ್ಪಿಸಿ ಅನಧಿಕೃತ ಹಾಗೂ ಸಾರ್ವಜನಿಕರ ವಾಹನಗಳನ್ನು ನಿಯಂತ್ರಿಸಲು ಅನುಕೂಲವಾಗುವುದರಿಂದ ಕೂಡಲೇ ಅಗತ್ಯಕ್ರಮಗಳನ್ನು ಕೈಗೊಂಡು ಹಂತಹಂತವಾಗಿ ಕಟ್ಟುನಿಟ್ಟಾಗಿ ಜಾರಿಗೆ ತರಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.49** | 2017–18ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ K-SET ಖಾತೆಯನ್ನು ಪರೀಕ್ಷಾ ಖಾತೆಯಲ್ಲಿ ವಿಲೀನಗೊಳಿಸಿ ಹೊಸ ಆದಾಯ ವೆಚ್ಚ ಶೀರ್ಷಿಕೆಗಳನ್ನು ಪೂರಕ ಆಯವ್ಯಯ ಅಂದಾಜಿನಲ್ಲಿ ಅಳವಡಿಸಿಕೊಳ್ಳುವ ಬಗ್ಗೆ. |
| ತೀರ್ಮಾನ | 2017–18ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ K-SET ಖಾತೆಯನ್ನು ಪರೀಕ್ಷಾ ಖಾತೆಯಲ್ಲಿ ವಿಲೀನಗೊಳಿಸಿ ಹೊಸ ಆದಾಯ ವೆಚ್ಚ ಶೀರ್ಷಿಕೆಗಳನ್ನು ಪೂರಕ ಆಯವ್ಯಯ ಅಂದಾಜಿನಲ್ಲಿ ಅಳವಡಿಸಿಕೊಳ್ಳುವುದು ಹಾಗೂ ಇದುವರೆಗೂ K-SETಗೆ ಸಂಬಂಧಪಟ್ಟ ಲೆಕ್ಕ ಪತ್ರಗಳನ್ನು ಮಹಾಲೇಖಪಾಲಕರು ಮತ್ತು ಕರ್ನಾಟಕ ಸರ್ಕಾರದ ಲೆಕ್ಕಪರಿಶೋಧಕರಿಂದ ಪರಿಶೀಲನೆ ನಡೆಸಿ, ಯಾವುದೇ ಆಕ್ಷೇಪಣೆಗಳು ಹಾಗೂ ವಸೂಲಾತಿಗಳಿಗೆ K-SETನ ಸಂಯೋಜಕರೇ ಸಂಪೂರ್ಣ ಜವಾಬ್ದಾರರಾಗುತ್ತಾರೆಂಬ ಹಣಕಾಸು ಸಮಿತಿಯ ತೀರ್ಮಾನವನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/10.50** | ಮೈಸೂರು ವಿಶ್ವವಿದ್ಯಾನಿಲಯದ 103 ಉದ್ಯೋಗಿಗಳಿಗೆ ಕಾಲ್ಪನಿಕವಾಗಿ ವೇತನ (Notional fixation) ನಿಗಧಿಪಡಿಸಿರುವ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದ 103 ಉದ್ಯೋಗಿಗಳಿಗೆ ಕಾಲ್ಪನಿಕವಾಗಿ ವೇತನ (Notional fixation) ನಿಗಧಿಪಡಿಸಿರುವ ಬಗ್ಗೆ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.<br>1. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿಯಾಗಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸಿರುತ್ತಿರುವ 103 ಉದ್ಯೋಗಿಗಳನ್ನು ಸಂಖ್ಯೆ: ಇಡಿ/ಯುಎಂವಿ 2008/ಬೆಂಗಳೂರು, ದಿನಾಂಕ 31.08.2012ರ ಸರ್ಕಾರಿ ಪತ್ರದ ಅನ್ವಯ ದಿ.26.11.2012 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ 103 ಉದ್ಯೋಗಿಗಳನ್ನು 01.08.2006 ರಲ್ಲಿ ಇದ್ದಂತಹ ಸ್ಥಿತಿಯಲ್ಲಿ ಮುಂದುವರೆಸಲು ಈ ಕಛೇರಿಯ ಆದೇಶ ಸಂಖ್ಯೆ ಇಟಿ.1/524/2007–08 ದಿನಾಂಕ 26.11.2012ರಂದು ಆದೇಶ ಹೊರಡಿಸಲಾಗಿದೆ.<br>2. ದಿ. 17.11.2012ರ ಸಿಂಡಿಕೇಟ್ ಸಭೆಯಲ್ಲಾಗಲೀ, ವಿ.ವಿ.ಆದೇಶದಲ್ಲಾಗಲೀ ಹಾಗೂ ಸರ್ಕಾರದ ಆದೇಶದಲ್ಲಾಗಲೀ ಕಾಲ್ಪನಿಕ ವೇತನ ಬಡ್ತಿಯನ್ನು ನೀಡಲು ಆದೇಶ ನೀಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಬಟವಾಡೆ ಅಧಿಕಾರಿಗಳು ಸದರಿ ಉದ್ಯೋಗಿಗಳಿಗೆ ದಿ.01.08.2006ರಿಂದ ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಯನ್ನು ನೀಡುವ ಸಂಬಂಧ |

| | |
|---|---|
| | ಅಲೋಕೇಷನ್ ಪಟ್ಟಿಯನ್ನು ಹಣಕಾಸು ಅಧಿಕಾರಿಗಳು ಅನುಮೋದಿಸಿ ಸೌಲಭ್ಯವನ್ನು ವಿಸ್ತರಿಸಿರುವುದು ಸಹ ಕಾನೂನುಬಾಹಿರವಾಗಿದೆ.<br>3. 103 ವಿದ್ಯಾರ್ಥಿಗಳ ಭವಿಷ್ಯದ ದೃಷ್ಠಿಯಿಂದ, 17-11-2012ರಿಂದ ಜಾರಿಗೆ ಬಂದಂತೆ ವೇತನವನ್ನು ನಿಗಧಿಪಡಿಸುವುದು ಹಾಗೂ 01-08-2006ರ ಆದೇಶವನ್ನು ಹಿಂಪಡೆಯುವುದು.<br>4. ವಿಶ್ವವಿದ್ಯಾನಿಲಯವು ತೆಗೆದುಕೊಳ್ಳಬೇಕಾದ ನಿರ್ಧಾರದ ಬಗ್ಗೆ ಸರ್ಕಾರಕ್ಕೆ ಪತ್ರವನ್ನು ಬರೆಯುವುದು. |
| ತೀರ್ಮಾನ | ಮೇಲಿನ ಅಂಶಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ 103 ಉದ್ಯೋಗಿಗಳಿಗೆ ಕಾಲ್ಪನಿಕವಾಗಿ ವೇತನ (Notional fixation) ನಿಗಧಿಪಡಿಸಿರುವ ಬಗ್ಗೆ ಸರ್ಕಾರದ ಆದೇಶದಲ್ಲಾಗಲೀ, ಸಿಂಡಿಕೇಟ್ ಸಭೆಯಲ್ಲಾಗಲೀ ಸ್ಪಷ್ಟವಾದ ಆದೇಶವಿಲ್ಲದಿರುವುದರಿಂದ ಸರ್ಕಾರಕ್ಕೆ ಪತ್ರ ಬರೆದು ನಿರ್ದೇಶನ ಕೋರಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.51** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2015-16ನೇ ಸಾಲಿನಿಂದ ಒಂದು ವರ್ಷದ ಬಿ.ಪಿ.ಇಡಿ (ಎರಡು ಸೆಮಿಸ್ಟರ್‌ಗಳು) ಕೋರ್ಸಿನ ಅವಧಿಯನ್ನು ಎರಡು ವರ್ಷಗಳ ಅವಧಿಗೆ **(Under-CBCS & CAGP)** ವಿಸ್ತರಿಸಿರುವ ಸಂಬಂಧ ಸಂಬಂಧ ಆರ್ಡಿನೆನ್ಸ್ ಹೊರಡಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾರಿಯಲ್ಲಿದ್ದಂತಹ ಒಂದು ವರ್ಷದ ಬಿ.ಇಡಿ. (ಎರಡು ಸೆಮಿಸ್ಟರ್‌ಗಳು) ಕೋರ್ಸಿನ ಅವಧಿಯನ್ನು **National Council of Teacher Education (NCTE)** ಇವರ ನಿರ್ದೇಶನದಂತೆ 2015-16ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಎರಡು ವರ್ಷದ ಅವಧಿಗೆ **(Under-CBCS & CAGP)** ವಿಸ್ತರಿಸಿರುವುದನ್ನು ಆರ್ಡಿನೆನ್ಸ್ ಹೊರಡಿಸಲು ವಿದ್ಯಾವಿಷಯಕ ಪರಿಷತ್ ಅನುಮೋದಿಸಿದ್ದು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 42(1) (ಬಿ) ಮತ್ತು 43(4) ರೀತ್ಯಾ 2015-16ನೇ ಸಾಲಿನಿಂದ ಅನ್ವಯವಾಗುವಂತೆ ಆರ್ಡಿನೆನ್ಸ್ ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು. |
| **2017/10.52** | **ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2016-17ನೇ ಶೈಕ್ಷಣಿಕ ಸಾಲಿನಿಂದ Bachelor of Business Management (BBM) ಎಂಬ ಕೋರ್ಸಿನ ಶಿರೋನಾಮೆಯನ್ನು Bachelor of Business Administration (BBA) ಎಂದು ಬದಲಾವಣೆ ಮಾಡಿಕೊಂಡಿರುವ ಶಿರೋನಾಮೆಗೆ** ಆರ್ಡಿನೆನ್ಸ್ ಹೊರಡಿಸುವ ಬಗ್ಗೆ. |
| ತೀರ್ಮಾನ | 2016-17ನೇ ಶೈಕ್ಷಣಿಕ ಸಾಲಿನಿಂದ **Bachelor of Business Management (BBM)** ಎಂಬ ಕೋರ್ಸಿನ ಶಿರೋನಾಮೆಯನ್ನು **Bachelor of Business Administration (BBA)** ಎಂದು ಬದಲಾವಣೆ ಮಾಡಿಕೊಂಡಿರುವ ಶಿರೋನಾಮೆಗೆ ಆರ್ಡಿನೆನ್ಸ್ ಹೊರಡಿಸಲು ವಿದ್ಯಾವಿಷಯಕ ಪರಿಷತ್ ಅನುಮೋದಿಸಿದ್ದು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 42(1) (ಬಿ) ಮತ್ತು 43(4) ರೀತ್ಯಾ 2016-17ನೇಸಾಲಿನಿಂದ ಅನ್ವಯವಾಗುವಂತೆ ಆರ್ಡಿನೆನ್ಸ್ ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು. |
| **2017/10.53** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2016-17ನೇ ಶೈಕ್ಷಣಿಕ ಸಾಲಿನಿಂದ ಸಂವಹನ ಮತ್ತು ಪತ್ರಿಕೋದ್ಯಮ ಎಂಬ ಸ್ನಾತಕೋತ್ತರ ಕೋರ್ಸಿನ ಶಿರೋನಾಮೆಯನ್ನು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಎಂದು ಬದಲಾವಣೆ ಮಾಡಿಕೊಂಡಿರುವ ಶಿರೋನಾಮೆಗೆ ಆರ್ಡಿನೆನ್ಸ್ ಹೊರಡಿಸುವ ಬಗ್ಗೆ. |
| ತೀರ್ಮಾನ | 2016-17ನೇ ಶೈಕ್ಷಣಿಕ ಸಾಲಿನಿಂದ "ಸಂವಹನ ಮತ್ತು ಪತ್ರಿಕೋದ್ಯಮ" ಎಂಬ ಸ್ನಾತಕೋತ್ತರ ಕೋರ್ಸಿನ ಶಿರೋನಾಮೆಯನ್ನು "ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ" ಎಂದು ಬದಲಾವಣೆ ಮಾಡಿಕೊಂಡಿರುವ ಶಿರೋನಾಮೆಗೆ ಆರ್ಡಿನೆನ್ಸ್ ಹೊರಡಿಸಲು ವಿದ್ಯಾವಿಷಯಕ ಪರಿಷತ್ ಅನುಮೋದನೆ ನೀಡಿದ್ದು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ ಪ್ರಕರಣ 42(1)(ಬಿ) ಮತ್ತು 43(4) ರೀತ್ಯಾ, 2016-17ನೇ ಸಾಲಿನಿಂದ ಅನ್ವಯವಾಗುವಂತೆ ಆರ್ಡಿನೆನ್ಸ್ ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2017/10.54** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2016-17ನೇ ಶೈಕ್ಷಣಿಕ ಸಾಲಿನಿಂದ Master of Tourism Administration (MTA - Integrated) ಎಂಬ ಕೋರ್ಸಿನ ಶಿರೋನಾಮೆಯನ್ನು Master of Tourism and Travel Management (MTTM - Integrated) ಎಂದು ಬದಲಾವಣೆ ಮಾಡಿಕೊಂಡಿರುವ ಶಿರೋನಾಮೆಗೆ ಆರ್ಡಿನೆನ್ಸ್ ಹೊರಡಿಸುವ ಬಗ್ಗೆ. |
| ತೀರ್ಮಾನ | 2016-17ನೇ ಶೈಕ್ಷಣಿಕ ಸಾಲಿನಿಂದMaster of Tourism Administration (MTA - Integrated) ಎಂಬ ಕೋರ್ಸಿನ ಶಿರೋನಾಮೆಯನ್ನು Master of Tourism and Travel Management (MTTM - Integrated) ಎಂದು ಬದಲಾವಣೆ ಮಾಡಿಕೊಂಡಿರುವುದನ್ನು ಆರ್ಡಿನೆನ್ಸ್ ಹೊರಡಿಸಲು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿರುವುದನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 42(1) (ಬಿ) ಮತ್ತು 43(4) ರೀತ್ಯಾ 2016-17ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಆರ್ಡಿನೆನ್ಸ್ ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು. |
| **2017/10.55** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2015-16ನೇ ಸಾಲಿನಿಂದ ಒಂದು ವರ್ಷದ ಬಿ.ಇಡಿ (ಎರಡು ಸೆಮಿಸ್ಟರ್‌ಗಳು) ಕೋರ್ಸಿನ ಅವಧಿಯನ್ನು ಎರಡು ವರ್ಷಗಳ ಅವಧಿಗೆ (Under-CBCS & CAGP) ವಿಸ್ತರಿಸಿರುವ ಸಂಬಂಧ ಆರ್ಡಿನೆನ್ಸ್ ಹೊರಡಿಸುವ ಬಗ್ಗೆ. |
| ತೀರ್ಮಾನ | 2015-16ನೇ ಶೈಕ್ಷಣಿಕ ಸಾಲಿನಿಂದ ಒಂದು ವರ್ಷದ ಬಿ.ಇಡಿ (ಎರಡು ಸೆಮಿಸ್ಟರ್‌ಗಳು) ಕೋರ್ಸಿನ ಅವಧಿಯನ್ನು ಎರಡು ವರ್ಷಗಳ ಅವಧಿಗೆ (Under-CBCS & CAGP) ವಿಸ್ತರಿಸಿರುವ ಸಂಬಂಧ ಆರ್ಡಿನೆನ್ಸ್ ಹೊರಡಿಸಲು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿರುವುದನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 42(1) (ಬಿ) ಮತ್ತು 43(4) ರೀತ್ಯಾ 2015-16ನೇ ಸಾಲಿನಿಂದ ಅನ್ವಯವಾಗುವಂತೆ ಆರ್ಡಿನೆನ್ಸ್ ಹೊರಡಿಸುವ ವಿಷಯವನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/10.56** | 2008 ರಿಂದ 2014ರ ಶೈಕ್ಷಣಿಕ ಸಾಲಿನಿಂದ 06 ವರ್ಷಗಳ ಎಂ.ಎಸ್ಸಿ.ಇಡಿ ಪದವಿಯು ಬಿ.ಎಸ್ಸಿ.ಬಿ.ಇಡಿ ಮತ್ತು ಎಂ.ಎಸ್ಸಿ ಪದವಿಗಳಿಗೆ ಸಮಾನವೆಂದು ಅನುಷ್ಠಾನಗೊಳಿಸಿರುವುದಕ್ಕೆ ಆರ್ಡಿನೆನ್ಸ್ ಹೊರಡಿಸುವ ಬಗ್ಗೆ. |
| ತೀರ್ಮಾನ | 2008ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭವಾಗಿರುವ 06 ವರ್ಷಗಳ M.Sc. Ed. Integrated ಪದವಿಯನ್ನು 2014-15ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ 04 ವರ್ಷ ಪೂರೈಸಿದಂತಹ ವಿದ್ಯಾರ್ಥಿಗಳು Exit ಆದಲ್ಲಿ BSc.Ed. ಎಂದು ಮತ್ತೆರಡು ವರ್ಷ ಪೂರೈಸಿದವರಿಗೆ M.Sc. Ed. (Physics, Chemistry & Mathematics) ಎಂದು ಪದವಿಯನ್ನು ನೀಡಲು ಹಾಗೂ ಈ ಪದವಿಗಳು BSc. B.Ed. ಮತ್ತು M.Sc. ಪದವಿಗಳಿಗೆ ಸಮಾನವೆಂದು ಅನುಷ್ಠಾನಗೊಳಿಸಿರುವುದಕ್ಕೆ ಆರ್ಡಿನೆನ್ಸ್ ಹೊರಡಿಸಲು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿರುವುದನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 42(1) (ಬಿ) ಮತ್ತು 43(4) ರೀತ್ಯಾ 2014-15ನೇ ಸಾಲಿನಿಂದ ಅನ್ವಯವಾಗುವಂತೆ ಆರ್ಡಿನೆನ್ಸ್ ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು. |
| **2017/10.57** | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮೊಬೈಲ್ ವೆಚ್ಚವನ್ನು ಭರಿಸುವ ಬಗ್ಗೆ. |
| ತೀರ್ಮಾನ | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿ, ಮಾನಸಗಂಗೋತ್ರಿ, ಮೈಸೂರು ಹಾಗೂ ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು ಇವರಿಗೆ ಬಿಎಸ್‌ಎನ್‌ಎಲ್ ಯಾವುದಾದರೂ ಪ್ಯಾಕೇಜ್ ಅಡಿಯಲ್ಲಿ Pre-paid ಸಿಮ್ ಖರೀದಿಸಿ ನೀಡಲು ತೀರ್ಮಾನಿಸಲಾಯಿತು. |

| | |
|---|---|
| **2017/10.58** | ಕೃಷ್ಣ, ಡಿ.ಎಸ್. ಸಂಶೋಧನಾ ಅಭ್ಯರ್ಥಿ, ಇವರು ಮಹಾಪ್ರಬಂಧವನ್ನು ಸಲ್ಲಿಸಲು ಒಂದು ವರ್ಷ ಹೆಚ್ಚುವರಿ ಕಾಲಾವಕಾಶ ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀ ಕೃಷ್ಣ ಡಿ.ಎಸ್, ಸಂಶೋಧನಾ ಅಭ್ಯರ್ಥಿ, ಸಮಾಜ ಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ ಮೈಸೂರು, ಇವರ ಪಿಹೆಚ್.ಡಿ ನೋಂದಣಿ ಅವಧಿ ದಿನಾಂಕ 23-09-2017 ರಂದು ಪೂರ್ಣಗೊಂಡಿದ್ದು, ಅನಾರೋಗ್ಯ ಕಾರಣದಿಂದ ವೈದ್ಯರ ಸಲಹೆ ಮೇರೆಗೆ, ಮಹಾಪ್ರಬಂಧವನ್ನು ಸಲ್ಲಿಸಲು ಒಂದು ವರ್ಷ ಹೆಚ್ಚುವರಿ ಕಾಲಾವಕಾಶವನ್ನು ಕೋರಿದ್ದು ಹಾಗೂ ಇವರ ಮಾರ್ಗದರ್ಶಕರೂ ಸಹ 06 ತಿಂಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಲು ಶಿಫಾರಸ್ಸು ಮಾಡಿರುವ ಮನವಿಯನ್ನು ಪರಿಗಣಿಸಿ ರೂ.50,000/-ಗಳ ದಂಡ ಶುಲ್ಕದೊಂದಿಗೆ ಸದರಿ ವಿದ್ಯಾರ್ಥಿಗೆ 06 ತಿಂಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು |
| **2017/10.59** | ಕೆ. ಅನಂತಗೌಡ, ಸಂಶೋಧನಾ ಅಭ್ಯರ್ಥಿ, ಇವರು ಮಹಾಪ್ರಬಂಧವನ್ನು ಸಲ್ಲಿಸಲು ಆರು ತಿಂಗಳುಗಳ ಹೆಚ್ಚುವರಿ ಕಾಲಾವಕಾಶ ಕೋರಿರುವ ಬಗ್ಗೆ. |
| ತೀರ್ಮಾನ | ಕೆ. ಅನಂತಗೌಡ, ಸಂಶೋಧನಾ ಅಭ್ಯರ್ಥಿ, ಸಮಾಜ ಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಪಿಹೆಚ್.ಡಿ ನೋಂದಣಿ ಅವಧಿ ದಿನಾಂಕ 23-09-2017 ರಂದು ಪೂರ್ಣಗೊಂಡಿದ್ದು, ಅನಾರೋಗ್ಯ ಕಾರಣದಿಂದ, ವೈದ್ಯರ ಸಲಹೆ ಮೇರೆಗೆ, ಮಹಾಪ್ರಬಂಧವನ್ನು ಸಲ್ಲಿಸಲು 06 ತಿಂಗಳು ಹೆಚ್ಚುವರಿ ಕಾಲಾವಕಾಶವನ್ನು ಕೋರಿರುವ ಮನವಿಯನ್ನು ಪರಿಗಣಿಸಿ ರೂ. 50,000/-ಗಳ ದಂಡ ಶುಲ್ಕದೊಂದಿಗೆ ಸದರಿ ವಿದ್ಯಾರ್ಥಿಗೆ 06 ತಿಂಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.60** | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Program ಗಳನ್ನು ನಡೆಸುತ್ತಿರುವ Sampoorna International Institute of Agri Science and Horticultural Technology, Channapatna ಸಂಸ್ಥೆಗೆ Expert Committee ಯು ಭೇಟಿ ನೀಡಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್ ಈಗಾಗಲೇ ಕಳೆದ ಸಿಂಡಿಕೇಟ್ ಸಭೆಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿ ಮೀರಿ ನಡೆಸಲಾಗುವ ಎಲ್ಲಾ ರೀತಿಯ ಕೋರ್ಸ್‌ಗಳನ್ನು ಸ್ಥಗಿತಗೊಳಿಸಲು ನಿರ್ಣಯ ಕೈಗೊಂಡು ಈ ಬಗ್ಗೆ ಅಧಿಸೂಚನೆಯನ್ನು ಹೊರಡಿಸಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Program ಗಳನ್ನು ನಡೆಸುತ್ತಿರುವ Sampoorna International Institute of Agri Science and Horticultural Technology, Channapatna ಸಂಸ್ಥೆಗೆ 2017-18ನೇ ಸಾಲಿಗೆ ಹೆಚ್ಚುವರಿಯಾಗಿ 60 ಸಂಖ್ಯಾ ಮಿತಿಯನ್ನು ಮಂಜೂರು ಮಾಡದಿರಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/10.61** | ಡಾ. ಎಸ್. ಶ್ರೀಕಂಠಸ್ವಾಮಿ, ಸಹ ಪ್ರಾಧ್ಯಾಪಕರು ಅವರ ನಿಯೋಜನೆಯನ್ನು ತೆರವುಗೊಳಿಸಿ ಮಾತೃ ವಿಭಾಗಕ್ಕೆ ಮರಳಿಸುವ ಬಗ್ಗೆ. |
| ತೀರ್ಮಾನ | ಡಾ. ಎಸ್. ಶ್ರೀಕಂಠಸ್ವಾಮಿ, ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು, ಮೈಸೂರು ಇವರು ಸುಮಾರು ಹದಿನೈದು ವರ್ಷಗಳಿಂದ ನಿಯೋಜನೆ ಆಧಾರದಲ್ಲಿ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವುದನ್ನು ಪರಿಶೀಲಿಸಿದ ಸಿಂಡಿಕೇಟ್ ಶ್ರೀಯುತರನ್ನು ಕೂಡಲೇ ಯುವರಾಜ ಕಾಲೇಜಿನ ಅವರ ಮಾತೃ ವಿಭಾಗದ ಹುದ್ದೆಗೆ ಮರಳಿಸಿ ವರದಿ ಮಾಡಿಕೊಳ್ಳಲು ಹಾಗೂ ಶ್ರೀಯುತರು ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾಗಿ ನೇಮಕಗೊಂಡು ಸೇವೆ ಸಲ್ಲಿಸುತ್ತಿರುವುದರಿಂದ ಸದರಿ ಹುದ್ದೆಯ ಅವಧಿಯು ಪೂರ್ಣವಾಗುವವರೆಗೂ ನಿರ್ದೇಶಕರ ಹುದ್ದೆಯಲ್ಲಿ ಮುಂದುವರೆಸಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |

<u>ಇತರೆ ವಿಷಯಗಳು</u>

1. ಈ ಹಿಂದೆ ಕುಲಸಚಿವರಾಗಿದ್ದ ಡಾ.ಬಸವರಾಜು ಇವರ ಅನುಪಸ್ಥಿತಿಯ ಅವಧಿಯಲ್ಲಿ ಕುಲಸಚಿವರು(ಪರೀಕ್ಷಾಂಗ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ.ಆರ್.ರಾಜಣ್ಣ ಇವರು ಪ್ರಭಾರ ಕುಲಸಚಿವರಾಗಿ ವಿಶ್ವವಿದ್ಯಾನಿಲಯದಲ್ಲಿ ನಡೆದ ಭಾರತೀಯ ವಿಜ್ಞಾನ ಕಾಂಗ್ರೆಸ್ ಕಾರ್ಯಕ್ರಮಕ್ಕೆ ಹೆಚ್ಚುವರಿಯಾಗಿ ರೂ.9,15,45,000/-ಗಳಿಗೆ ಸಹಿ ಮಾಡಿ ಆದೇಶ ನೀಡಿರುವುದು ನಿಯಮಾನುಸಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಆದುದರಿಂದ, ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರಕ್ಕೆ ಶೀಘ್ರವಾಗಿ ಪತ್ರ ಬರೆದು, ಸರ್ಕಾರ ನೀಡುವ ನಿರ್ದೇಶನದಂತೆ ಕ್ರಮ ಕೈಗೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು.

2. ಸಿಎಎಸ್ ಪದೋನ್ನತಿ ಸಂಬಂಧ 2006-07ರ ನಂತರ ಬರುವ ಪದೋನ್ನತಿಗಳನ್ನು ಪರಿಗಣಿಸುವುದು ಅಲ್ಲದೆ, ಸಿಎಎಸ್ ಸಂಬಂದ ಕೋರ್ಟ್‌ನಲ್ಲಿ ವ್ಯಾಜ್ಯವಿದ್ದರೆ ಅವರುಗಳನ್ನು ಬಿಟ್ಟು ಅರ್ಹತೆಯಿರುವರಿಗೆ ಪದೋನ್ನತಿ ನೀಡಲು ಆದಷ್ಟು ಬೇಗನೇ ಸಿಎಎಸ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸಭೆಯು ತೀರ್ಮಾನಿಸಿತು.

3. ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಪಟ್ಟ ಕಾಲೇಜುಗಳಿಗೆ ಪರೀಕ್ಷಾ ಕಾರ್ಯಕ್ರಮದ ನಿಮಿತ್ತ, ಪರಿವೀಕ್ಷಕರಾಗಿ ನಿಯೋಜನೆಗೊಳ್ಳುವ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಪರೀಕ್ಷಾ ಕಾರ್ಯದ ವೀಕ್ಷಣಾ ವೇಳೆಯಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ತಮ್ಮ ಕೆಲಸವನ್ನು ನಿರ್ವಹಿಸತಕ್ಕದ್ದು ಎನ್ನುವ ಸೂಚನೆಯನ್ನು ಪರೀಕ್ಷಾ ವೀಕ್ಷಕರಿಗೆ ನೀಡಲು ಸಭೆಯು ನಿರ್ಣಯಿಸಿತು.

4. Life long distinguished Professor ಅಧಿನಿಯಮಗಳಿಗೆ ಸಂಬಂಧಿಸಿದಂತೆ, Life long ಪದವನ್ನು ತೆಗೆದು ರಾಜಕೀಯ ವ್ಯಕ್ತಿಗಳನ್ನು ಆಯ್ಕೆ ಮಾಡದೆ, ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ತೊಡಗಿಕೊಂಡಿರುವ ವಿಷಯ ತಜ್ಞರನ್ನು ಮಾತ್ರ ನೇಮಿಸಿಕೊಳ್ಳಲು ಅನುವಾಗುವ ಅಂಶಗಳನ್ನು ಸೇರಿಸಲು ವಿಶ್ವವಿದ್ಯಾನಿಲಯವು ರಚಿಸಿರುವ ಅಧಿನಿಯಮದ ಕಮಿಟಿಯ ಮುಂದೆ ಮಂಡಿಸಿ ಸೂಕ್ತ ತಿದ್ದುಪಡಿಗಳನ್ನು ಮಾಡಿ ಎಲ್ಲಾ ಪ್ರಾಧಿಕಾರಗಳ ಅನುಮೋದನೆ ಪಡೆದು ಸರ್ಕಾರಕ್ಕೆ ಆದಷ್ಟು ಬೇಗನೇ ಸರ್ಕಾರಕ್ಕೆ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಿಕೊಡಲು ಸಿಂಡಿಕೇಟ್ ತೀರ್ಮಾನಿಸಿತು.

ಕೊನೆಯಲ್ಲಿ ಒಂಬತ್ತನೇ ಸಾಮಾನ್ಯ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಲಹೆ ಸಹಕಾರಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ**

ಸಹಿ/-
**ಕುಲಪತಿ ಮತ್ತು ಅಧ್ಯಕ್ಷರು**